ಕರ್ನಾಟಕ ವಿಧಾನಸಭೆ

ಬುಧವಾರ 27ನೇ ಜುಲೈ 2005ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 2 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

1. ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.(ಬೇಡಿಕೆಗಳ ಸಂಖ್ಯೆ:– 14, 7, 13, 12, 11, 27, 28, 24, 20, 8, 22, 3, 26, 15, 5, 21, 2, 4, 19 ಮತ್ತು 25)

ಅಧ್ಯಕ್ಷರು: ಬೇಡಿಕೆ ಮೇಲಿನ ಚರ್ಚೆ ಇವತ್ತು ಮುಗಿಸಲೇಬೇಕಾಗಿದೆ. ನಾಳೆ ಚರ್ಚೆಗೆ ಉತ್ತರ. 15 ಜನ ಮಂತ್ರಿಗಳು ಉತ್ತರ ಕೊಡಬೇಕು. ಆದ್ದರಿಂದ ಬೆಳಿಗ್ಗೆ 10 ರಿಂದ ರಾತ್ರಿ ಎಂಟು, 9 ಗಂಟೆ ಆದರೂ ಚರ್ಚೆಗೆ ಉತ್ತರ ಮುಗಿಯುವುದಿಲ್ಲ. ಆ ಕಾರಣದಿಂದ ಇವತ್ತು ಎಷ್ಟು ಗಂಟೆ ಆದರೂ ರಾತ್ರಿ 12 ಗಂಟೆ ಆಗಲಿ ನಾವು ಕೂರುವುದಕ್ಕೆ ಸಿದ್ಧರಿದ್ದೇವೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಇವತ್ತು ಚರ್ಚೆ ಮುಗಿಸಬೇಕೆಂದು ಹೇಳುತ್ತೇನೆ. ಈಗ ಮಾನ್ಯ ಜೀವಿಜಯರವರು, ಮಾತನಾಡಿ.

ಶ್ರೀ ಬಿ.ಎ.ಜೀವಿಜಯ (ಸೋಮವಾರಪೇಟೆ): ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಯಾರೂ ಇಲ್ಲ.

ಅಧ್ಯಕ್ಷರು: ಇರಲಿ ಮಾತನಾಡಿ, ಈಗ ಅದನ್ನೆಲ್ಲಾ ಮಾತನಾಡುವುದಕ್ಕೆ ಅವಕಾಶ ಇಲ್ಲ, ಬರುತ್ತಾರೆ. ಎರಡು–ಎರಡೂವರೆ ಗಂಟೆಗೆ ಬಂದು ಬಿಡುತ್ತೇವೆಂದು ಹೇಳಿದರು. ಬರುತ್ತಾರೆ ತಾವು ಶುರುಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾಂಗ್ರೆಸ್‌ನವರು ಸಮಾವೇಶ ಇತ್ತು ಎಂದು ಬಂದಿಲ್ಲ ಪರವಾಗಿಲ್ಲ. ಜೆಡಿಎಸ್‌ನ ಮಂತ್ರಿಗಳಿಗೆ ಏನಾಗಿದೆ? ಅವರೂ ಸಮಾವೇಶಕ್ಕೆ ಹೋಗಿದ್ದಾರಾ?

ಅಧ್ಯಕ್ಷರು: ಅವರೂ ಮಿತ್ರರಲ್ಲಾ, ಅವರು ಏನು ಮಾತನಾಡುತ್ತಾರೆಂದು ಇವರು ದೂರದರ್ಶನದ ಮುಂದೆ ಕುಳಿತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರ ಸಂಘರ್ಷ ಇವತ್ತಿನಿಂದ ಪ್ರಾರಂಭನಾ ಹಾಗಾದರೆ, ಮೊದಲಿನಿಂದ ನಡೆಯುತ್ತಿರುವುದು ಇವತ್ತು ತಾರಕಕ್ಕೆ ಮುಟ್ಟುತ್ತದೋ ಹೇಗೆ? ಕಾಂಗ್ರೆಸ್‌ನವರು ಐದು ಹತ್ತು ನಿಮಿಷ ತಡವಾಗಿ ಬಂದರೆ ನಮಗೆ ಅರ್ಥವಾಗುತ್ತದೆ. ಅವರ ಸಮಾವೇಶ ಇದೆ ಎಂದು. ಜೆಡಿಎಸ್ ಮಂತ್ರಿಗಳಾದರೂ ಬರಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇದು ಸಮ್ಮಿಶ್ರ ಸರ್ಕಾರ. ಅವರಿಗೂ ಆಮಂತ್ರಣ ಹೋಗಿದೆ, ಅವರೂ ಕಾರ್ಯಕ್ರಮಕ್ಕೆ ಹೋಗಿದ್ದಾರೆ.

ಅಧ್ಯಕ್ಷರು: ಮಾನ್ಯ ಜೀವಿಜಯರವರೆ, ಮಾತನಾಡಿ. ಈಗಾಗಲೇ ತಡವಾಗಿದೆ.

ಶ್ರೀ ಬಿ.ಎ. ಜೀವಿಜಯ: ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರೆವಿನ್ಯೂ ಮಂತ್ರಿಗಳು ಇಲ್ಲ.

ಅಧ್ಯಕ್ಷರು: ತಾವು ಮಾತನಾಡಿ, ಅವರ ಕಾರ್ಯದರ್ಶಿಗಳು ರೆಕಾರ್ಡ್ ಮಾಡಿಕೊಳ್ಳುತ್ತಾರೆ

ಶ್ರೀ ಬಿ.ಎ. ಜೀವಿಜಯ: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಕರ್ನಾಟಕ ರಾಜ್ಯ ಈ ವರ್ಷ ಸುವರ್ಣ ಮಹೋತ್ಸವವನ್ನು ಆಚರಣೆ ಮಾಡುತ್ತದೆ. ಅದಕ್ಕೋಸ್ಕರ 10 ಕೋಟಿ ರೂಪಾಯಿ ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ನಾನು ಕೊಡಗಿನಿಂದ ಬಂದಿರುವವನು. ಆಗಾಗ ನನ್ನ ಮಿತ್ರರಾದ ವೈಜನಾಥ್ ಪಾಟೀಲ್‌ರವರು ನಾನು ಹೈದರಾಬಾದ್ ಕರ್ನಾಟಕದಿಂದ ಬಂದಿದ್ದೇನೆಂದು ಹೇಳುತ್ತಾರೆ, ಅನೇಕರು ಮುಂಬೈ ಕರ್ನಾಟಕದಿಂದ ಬಂದವರು ಎಂದು ಹೇಳುತ್ತಾರೆ. ನಾನು ಕೊಡಗು ಕರ್ನಾಟಕ ಅಥವಾ ಮಲೆನಾಡು ಕರ್ನಾಟಕ ಎಂದು ಹೇಳುವುದಿಲ್ಲ. ಕರ್ನಾಟಕ ಎಂದು ಹೇಳುತ್ತೇನೆ. ಸಭಾಧ್ಯಕ್ಷರೆ, 1834ನೇ ಇಸವಿಯಲ್ಲಿ ಕೊಡಗನ್ನು ಬ್ರಿಟೀಷರು ಸ್ವಾಧೀನಕ್ಕೆ ಪಡೆದುಕೊಂಡರು. ಬ್ರಿಟೀಷರು ಎಂದರೆ ಈಸ್ಟ್ ಇಂಡಿಯಾ ಕಂಪನಿಯವರು. ಈಗ 2005ನೇ ಇಸವಿಗೆ 171 ವರ್ಷಗಳ ಕಾಲ ಸರಿದು ಹೋಗಿದೆ. ನಾವು ಕರ್ನಾಟಕ ರಾಜ್ಯಕ್ಕೆ 1956ನೇ ಇಸವಿಯಲ್ಲಿ ಸೇರ್ಪಡೆಯಾಗಿದ್ದು. ದಿನಾಂಕ 1.11.1956ರಲ್ಲಿ ಆಗ ಭಾಷಾವಾರು ರಾಜ್ಯಗಳನ್ನು ರಚನೆ ಮಾಡಬೇಕೆಂದು ಫಜಲ್ ಆಲಿ ಕಮೀಷನ್‌ನಲ್ಲಿ ಹೆಚ್.ಎನ್. ಕುಂಜ್ರು ಮತ್ತು ಕೆ.ಎಮ್. ಪಣಿಕ್ಕರ್‌ರವರು ಸದಸ್ಯರಾದ ಸಂದರ್ಭದಲ್ಲಿ ಕೊಡಗು ಕೂಡ ಕನ್ನಡ ಭಾಷೆ ಮಾತನಾಡತಕ್ಕಂತಹ ಒಂದು ಪ್ರದೇಶ ಎಂದು ಹೇಳಿ ಕರ್ನಾಟಕ ರಾಜ್ಯಕ್ಕೆ ಸೇರಿಸಿದ್ದಾರೆ. ಕೊಡಗು ಕರ್ನಾಟಕ ರಾಜ್ಯಕ್ಕೆ ಸೇರುವವರೆಗೆ 1834ನೇ ಇಸವಿಯಲ್ಲಿ ಏನು ಈಸ್ಟ್ ಇಂಡಿಯಾ ಕಂಪನಿಯವರು ಕೊಡಗನ್ನು ಸ್ವಾಧೀನಕ್ಕೆ ತೆಗೆದುಕೊಂಡರು 1889ನೇ ಇಸವಿಯಲ್ಲಿ ಕೂರ್ಗ್ ಲ್ಯಾಂಡ್ ರೆಗ್ಯುಲೇಷನ್ ಆಕ್ಟ್ ಜಾರಿಗೆ ತಂದರು. ಕೂರ್ಗ್ ಲ್ಯಾಂಡ್ ರೆಗ್ಯುಲೇಷನ್ ವಿಷಯದ ಬಗ್ಗೆ ಇವತ್ತು ಸವಿಸ್ತಾರವಾಗಿ ನಾನು ಮಾತನಾಡುವುದಕ್ಕೆ ಸಮಯ ಕೂಡ ಇಲ್ಲ. ಆದರೆ ಕೊಡಗು ಕರ್ನಾಟಕ ರಾಜ್ಯಕ್ಕೆ ಸೇರಿದ ಮೇಲೆ 1964ನೇ ಇಸವಿಯವರೆ ಕೂಡ ಕೂರ್ಗ್ ಲ್ಯಾಂಡ್ ರೆಗ್ಯುಲೇಷನ್ ಆಕ್ಟ್ ಏನಿತ್ತು ಅದನ್ನೇ ಕರ್ನಾಟಕ ರಾಜ್ಯದಲ್ಲಿ ಅನುಸರಿಸಿಕೊಂಡು ಬಂದರು. ಕರ್ನಾಟಕ ರಾಜ್ಯದಲ್ಲಿ 1964ನೇ ಇಸವಿಯಲ್ಲಿ ಏನು ಕೆಎಲ್‌ಆರ್ ಆಕ್ಟ್ ಬಂದಿತು, ಬಂದ ಮೇಲೆ, ಹಿಂದೆ ಇದ್ದ 1889ನೇ ಇಸವಿಯ ಕೊಡಗು ರೆಗ್ಯುಲೇಷನ್ ಆಕ್ಟ್ ಮತ್ತು ಕೊಡಗು ಅರಣ್ಯ ಕಾನೂನು 1875 ಅದು 1963ನೇ ಇಸವಿಯಲ್ಲಿ ಕರ್ನಾಟಕ ರಾಜ್ಯ ಅರಣ್ಯ ಆಕ್ಟ್ ಬಂದ ಮೇಲೆ ಇವೆರಡೂ ಕೂಡ ಸತ್ತು ಹೋಗಿವೆ. They do not exist. ಆದರೆ ನಾವು ಕರ್ನಾಟಕ ರಾಜ್ಯ ಸೇರಿದ ಮೇಲೆ ಕೂಡ ಹೆಚ್ಚು ಕಡಿಮೆ 50 ವರ್ಷಗಳಿಂದ ಕೊಡಗಿನಲ್ಲಿ ಹೋರಾಟ ಮಾಡುತ್ತಿದ್ದೇವೆ. 1964ನೇ ಕರ್ನಾಟಕ ಲ್ಯಾಂಡ್ ರೆಗ್ಯುಲೇಷನ್ ಆಕ್ಟ್ ಬಂದರೂ ಕೂಡ ನನಗೆ ಅರ್ಥವಾಗುವುದಿಲ್ಲ, ಕರ್ನಾಟಕ ರಾಜ್ಯದ ಸರ್ಕಾರ ಆಗಾಗ ಬರತಕ್ಕಂತಹ ಪ್ರತಿಯೊಬ್ಬ ಅಧಿಕಾರಿಗಳು ತಮ್ಮದೇ ಆದ ರೀತಿಯಲ್ಲಿ ನಮ್ಮ ಹಿಂದಿನ ಕೊಡಗಿನ ಲ್ಯಾಂಡ್ ರೆಗ್ಯುಲೇಷನ್ ಆಕ್ಟನ್ನೇ ಅದನ್ನು ಇಂಟರ್‌ಪ್ರಿಟ್ ಮಾಡುತ್ತಾ ಹೋಗಿ, ಈ ದಿವಸ ಕೊಡಗಿನಲ್ಲಿ ಒಂದು ರೀತಿಯ ಅಶಾಂತಿ ವಾತಾವರಣ ಮೂಡಿ ಬಂದಿದೆ. ಇದಕ್ಕೆ ಬೇಕಾದಷ್ಟು ಹೋರಾಟ ಆಯಿತು. ಅನೇಕ ಜನರು ರಾಜ್ಯದ ಹೈಕೋರ್ಟಿಗೆ ಆಗಲಿ ಅಥವಾ ಸುಪ್ರೀಂ ಕೋರ್ಟಿಗೆ ಆಗಲಿ ಎಲ್ಲಾ ಕಡೆ ಹೋಗಿದ್ದಾರೆ. ದಿವಂಗತ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ಈ ವಿಷಯವನ್ನು ಎರಡು ಸಾರಿ ಸಚಿವ ಸಂಪುಟದ ಸಭೆಗಳಲ್ಲಿ ಚರ್ಚೆ ಮಾಡಿದ್ದಾರೆ. ಒಂದು ಕ್ಯಾಬಿನೆಟ್ ಡಿಸ್‌ಕಷನ್ 660:96, ದಿನಾಂಕ 22-11-96, ಇನ್ನೊಂದು ಸಿ 426:97 ದಿನಾಂಕ 22.8.97. ಇವೆರಡರಲ್ಲೂ ಕೂಡ ಸನ್ಮಾನ್ಯ ಮಿತ್ರರಾದ ನಮ್ಮ ಸೋಮಶೇಖರ್‌ರವರು ಕಂದಾಯ

ಮಂತ್ರಿಗಳಾಗಿದ್ದರು. ಒಂದು ಕ್ಯಾಬಿನೆಟ್ ಉಪ ಸಮಿತಿಯನ್ನು ರಚನೆಮಾಡಿ ಸುದೀರ್ಘವಾಗಿ ಈ ಕೊಡಗಿನ ಕಾನೂನು ಇದು ಜಾರಿಯಲ್ಲಿ ಇದೆಯೋ 1889 Coorg Revenue Act or ಅದು ಸತ್ತು ಹೋಗಿದೆಯೋ Whether it is replaced by 1964 Karnataka Land Regulation Act ಎಂದು ಹೇಳಿ ಸುದೀರ್ಘವಾಗಿ ಚರ್ಚೆ ಮಾಡಿದರು. ಅಧ್ಯಕ್ಷರೆ, ಇದರ ಬಗ್ಗೆ ರಾಜ್ಯದ ಹೈಕೋರ್ಟ್‌ನಲ್ಲಿ ಬಹಳ ಚರ್ಚೆಯಾಗಿದೆ. ಅಲ್ಲಿ Points of consideration: ಏನಾಯಿತೆಂದರೆ,

1) Are the holders of the Bane Lands in Coorg upon Jamma tenure, the owners thereof? ಇದು ಒಂದನೆಯ ಪ್ರಶ್ನೆ.
2) Whether Rule 167 (1) of the Coorg Land & Revenue Regulation 1899, continues in operation despite the repeal of the Regulation by Karnataka Land Revenue Act, 1964? ಇದರ ಬಗ್ಗೆ 37 ಪುಟಗಳ ಸುದೀರ್ಘವಾದ ಒಂದು ಜಡ್ಜ್‌ಮೆಂಟ್ ಆಗಿದೆ. ಅದರಲ್ಲಿ ಅವರು ಹೇಳುತ್ತಾರೆ. "Rule 167 of the Rules framed under the Coorg Regulation would not survive after the repeal of Coorg Regulation by Karnataka Land Revenue Act, 1964." ಇದರಲ್ಲಿ ಮತ್ತೆ ಸರ್ಕಾರದವರು ಡಿವಿಷನ್ ಬೆಂಚ್‌ಗೆ ಹೋದರು. ಡಿವಿಷನ್ ಬೆಂಚ್‌ನಲ್ಲೂ ಕೂಡ

The point that was considered:

1) Are the holders of Bane Lands in Coorg upon Jamma tenure, the owners thereof?
2) Whethere Rule 167(1) of the Coorg Land and Revenue Regulation 1899 continues in operation despite the repeal of the Regulation by Karnataka Land Revenue Act, 1964?
3) To what relief the petitioners are entitled to? ಜಡ್ಜ್‌ಮೆಂಟ್‌ನಲ್ಲಿ ಹೇಳುತ್ತಾರೆ.

"...That these Jamma Bane Lands were assigned to their ancestors by the then Raja by lawful grants and these grants were recognised by the British Government when Coorg was annexed to East India Company from 1834 and the subsequent Rules and Regulations issued by the British Administration did not change the position nor is the position changed in the Karnataka State by the enactment of the Karnataka Land Revenue Act, 1964, and therefore impugned Circulars are liable

to be quashed and the declarations as prayed for should be granted to the petitioners." ಎಂದು ಹೇಳುತ್ತಾರೆ. ಸೀರೀಸ್ ಸರ್ಕ್ಯುಲರ್ಸ್‌ಗಳನ್ನು ಬೇಕಾದಷ್ಟು ಕಳುಹಿಸಿದ್ದಾರೆ ರೆವಿನ್ಯೂ ಇಲಾಖೆಯಿಂದ ಕಳುಹಿಸಿದ್ದಾರೆ. ಒಂದಲ್ಲ, ಎರಡಲ್ಲ, ಹತ್ತು ಹಲವಾರು ಕೊಡಗಿನವರ ಮೇಲೆ ನಿರ್ಬಂಧ ಹಾಕಿ. ಅದರ ಮುಂದೇನೂ ಕೂಡ ಹೇಳುತ್ತಾರೆ.

"That alienation of such Bane lands had to follow requisite procedure of obtaining prior permission from appropriate authority and if that was not done, such sale deeds effected in connection with the lands could not be registered." ಎಂದು ಗೌವರ್ನ್‌ಮೆಂಟ್ ಕಂಟೇನ್‌ಷನ್ ಆಗಿತ್ತು.

"Therefore no fault can be found with impugned Circulars or letters issued by the authorities. It was further contended that even after the repealing of the Coorg Regulation of 1899 by Karnataka Land Revenue Act 1964, in view of Section 202(2), Rule 167 found in Chapter-VI of the Coorg Regulation 1899, still continued to operate and hence alience of privileged Bane land had to pay to the Government as Nazarana a sum equal to 5% which subsequently was raised to 20% of the sale value of the land alienated and if that was not done, the sale deeds could not be registered."

That was the contention of the Government.

ಈ ಹೈಕೋರ್ಟ್ ಜಡ್ಜ್‌ಮೆಂಟ್ ಬಹಳ ಸವಿಸ್ತಾರವಾಗಿದೆ. ಅಧ್ಯಕ್ಷರೆ,

"But after the Bane became alienated, meaning thereby it got detached from the verge by its alienation or even if it was being separately assessed to land Revenue on account of being put under cultivation of coffee or any other crop, the Bane land became an alienated Bane and did not restrict the holder to exercise only privilege rights over the Bane, but gave him all the rights subject to limitations attached to the occupancy of an occupier or holder of unalienated land paying full land revenue assessment thereon. Hence, it must be held that whatever might have been the position during the time of Rajas ruling Coorg or whatever might have been the position between 1834 when

Coorg was attached to East India Company and upto promulgmation of Coorg Regulation 1899, after the later Regulation was promulgated the position of Jame Bane holders vis-a-vis their Jama Bane projected the following picture." ಅದು ಇನ್ನೂ ಸುಮಾರು ಇದೆ ಅಧ್ಯಕ್ಷರೆ, ಅದನ್ನೆಲ್ಲಾ ಡೀಟೈಲಾಗಿ ಹೇಳುವುದಕ್ಕೆ ತಾವು ನನಗೆ ಸಮಯವನ್ನು ಕೊಡುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ.

"The State authorities insisted that even after the repeal of parent Regulation 1899, Rule framed thereunder would survive..."

That is the contention of the State Government.

"...would survive its repeal for all times to come and even after 1964, for the first time say, after one decade or two decades or more if the holder of a privileged Bane land wants to aliente his land, he must pay nazarana as laid down under erstwhile Coorg Land Revenue Rules.

"It is impossible..." That is what the Court says.

"It is impossible to accept this contention. This would amount to holding that despite the repal of the parent legislation, the Rules framed thereunder would survive for all times to come thereafter and would cover all future transactions at any distant point of time, on the express language of the Proviso to clause(b) of Section 202 (1) such contention cannot be accepted.... The First point of the argument of the learned Senior Government Advocate for sustaining the operation of Section 167 (1) of the Coorg Land and Revenue Rules after the regulation itself was repealed by 1964 Act cannot be sustained and must be rejected... It is impossible to agree with this contention. The reason is obvious. Only such Rule or Regulation under the erstwhile repealed Coorg Regulation would continue after the repeal of the Regulation which will have a corresponding provision in the Karnataka Act.

We therefore, suggest to the learned Senior Counsel for the State Government to point out any corresponding Rule or provision under the Karnataka Act which can supply a peg on which Rule 167 of the erstwhile Rule under Coorg Regulation can be hanged. He was not in a position to point out any such corresponding provision in the Karnataka Act. Now, it may be noted that Rule 167 of the Rules framed under Coorg Regulation deals with the contingency where the holder of a privileged Bane wants to alienate privileged Bane held by him.

26. Now, it is obvious that neigher the clause-b of the proviso to sub-section 1 of Section 202 nor sub-section 2 of Section 202 can be of any help to save Rule 167 as we have already shown earlier, No rights, privileges, obligations, liabilities, can be said to have been incurred by anyone or can be said to have accrued to anyone under Rule 167 after the repeal of the parent Regulation. Similarly sub-section 2 of Section 202 will not save Rule 167 as there is no corresponding provision in the Karnataka Act to which such a Rule can be attached.

27. The offshort of this discussion is that Rule 167 of the Rules framed under the Coorg Regulation would not survive after the repeal of Coorg Regulation by Karnataka Land Revenue Act, 1964.

It is also declared that the alienated Jamma Bane lands which have ceased to be appendages to the warg, for servicing of which they were earlier held and which are put under cultivation and are fully assessed to land revenue, will be held by the holders of such alienated Jamma Bane lands as holders of occupancies of unalienated fully assessed lands and such occupants will be entitled to all the rights and will be subject to all the obligations of occupant-holders governed by the provisions of Karnataka Land Revenue Act, 1964 and the Rules made thereunder."

ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಾವು ಕರ್ನಾಟಕ ರಾಜ್ಯಕ್ಕೆ 1956ನೇ ನವೆಂಬರ್ 1ರಲ್ಲಿ ಸೇರ್ಪಡೆಯಾಗಿದ್ದೇವೆ. ಈಸ್ಟ್ ಇಂಡಿಯಾ ಕಂಪನಿಯವರು ಕೊಡಗು ರಾಜ್ಯವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡು, ಆಮೇಲೆ Governor in Council, who was in Shimla, ಅವರಿಗೆ ಪದೇ ಪದೇ ವರದಿಯನ್ನು ಕಳುಹಿಸುತ್ತಿದ್ದರು. ಕೊಡಗು ಒಂದು ವಿಶಿಷ್ಟವಾದ ಪ್ರದೇಶ. ಇಲ್ಲಿ ವಾಸಿಸತಕ್ಕಂಥ ಜನಗಳು ಒಂದು ಸಂಪ್ರದಾಯವನ್ನು ಇಟ್ಟುಕೊಂಡಿದ್ದಾರೆ. ಅವರನ್ನು ಒಂದು ರೀತಿಯಲ್ಲಿ ಚೆನ್ನಾಗಿ ನೋಡಿಕೊಳ್ಳಬೇಕಾದರೆ ನಾವು ಬಹಳ ಜಾಗ್ರತೆಯಿಂದ ಇರಬೇಕಾಗುತ್ತದೆ. ಆದ್ದರಿಂದ ಕೊಡಗಿನವರು ಮೈಸೂರಿನವರ ಜೊತೆ ಘಟ್ಟದ ಕೆಳಗೆ ಇರುವಂತಹವರ ಜೊತೆ ಸಂಪರ್ಕ ಮಾಡುವಂತಹ ಅವಕಾಶ ಮಾಡಕೂಡದು. ಆದ್ದರಿಂದ ನಾವು ಬ್ರಿಟಿಷರೇ ಈ ರಾಜ್ಯವನ್ನು ಆಳಬೇಕಾಗುತ್ತದೆ. 'We cannot trust the natives.' ಎಂದೂ ಕೂಡ ಹೇಳಿದ್ದಾರೆ, ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ಹಾಗೆ 1806ನೇ ಇಸವಿಯಲ್ಲಿ ಕೊಡಗು ರಾಜ್ಯ ಏನು ರಾಜರ ಆಳ್ವಿಕೆಯಲ್ಲಿ ಇತ್ತು, ಅಲ್ಲಿ ಬುದ್ದು ರಾಜ, ಲಿಂಗರಾಜರು ಏನು ಕೊಡಗನ್ನು ಆಳುತ್ತಿದ್ದರು, ಆಗ ಕೊಡಗಿನವರಿಗೆ ಅವರು ಜಮ್ಮಾ ಅಥವಾ ಜಮಿನಿ ಲ್ಯಾಂಡ್ಸ್ ಎಂದು ಹೇಳತಕ್ಕಂಥಾದ್ದನ್ನು ಜಾಗವನ್ನು ಕೊಟ್ಟಿದ್ದಾರೆ. ಇದನ್ನು ನಾವು ನೂರಾರು ವರ್ಷಗಳಿಂದ ಅನುಭವಿಸಿಕೊಂಡು ಬರುತ್ತಿದ್ದೇವೆ. 1801ನೇ ಇಸವಿಯಲ್ಲಿ ಬುದ್ದು ರಾಜರು ತಾವು ಕೊಟ್ಟಂತಹ ಜಾಗವನ್ನು ಸರ್ವೆ ಮಾಡಿದ್ದಾರೆ. ಬ್ರಿಟೀಷರು ಈ ಜಾಗವನ್ನು ತಮ್ಮ ಸ್ವಾಧೀನಕ್ಕೆ ಕೊಡಗಿನಲ್ಲಿ ತೆಗೆದುಕೊಂಡ ಮೇಲೆ 1897ನೇ ಇಸವಿಯಲ್ಲಿ ಕೊಡಗಿನ ಎಲ್ಲಾ ಜಾಗಗಳನ್ನು ಸರ್ವೆ ಮಾಡಿ, ನಕಾಶೆ ಮಾಡಿ ಪ್ರತಿಯೊಂದಕ್ಕೂ ಸರ್ವೆ ನಂಬರ್ ಕೊಟ್ಟಿದ್ದಾರೆ. ನಾನು ಕೇಳತಕ್ಕಂಥ ಪ್ರಶ್ನೆ ಇಷ್ಟೆ, ಈ ರೀತಿಯಲ್ಲಿ ಕೊಡಗು ರಾಜ್ಯ ಕರ್ನಾಟಕಕ್ಕೆ ಸೇರಿದಮೇಲೂ ಕೂಡ 1960ನೇ ಕರ್ನಾಟಕ ಲ್ಯಾಂಡ್ ರೆಗ್ಯುಲೇಷನ್ ಆಕ್ಟ್ ಬಂದರೂ ಕೂಡ, ಈ ಕಾನೂನು ಕೊಡಗಿಗೆ ಅನ್ವಯಿಸುವುದಿಲ್ಲವೆಂದು ಹೇಳುವಂತಹ ನಿಲುವನ್ನು ಸರ್ಕಾರ ಅಥವಾ ಸರ್ಕಾರದ ಕೆಲವು ಅಧಿಕಾರಿಗಳು ತೆಗೆದುಕೊಂಡಿದ್ದಾರೆ, ಎಲ್ಲಾ ಅಧಿಕಾರಿಗಳು ತೆಗೆದುಕೊಂಡಿಲ್ಲ, ಕೆಲವು ಅಧಿಕಾರಿಗಳು ತೆಗೆದುಕೊಂಡಿದ್ದಾರೆ, ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರಿಯೇ? ಕೊಡಗು 1964ನೇ ಕರ್ನಾಟಕ ಲ್ಯಾಂಡ್ ರೆಗ್ಯುಲೇಷನ್ ಆಕ್ಟ್ ಏನಿದೆ ಅದು ಕೊಡಗಿಗೆ ಅನ್ವಯಿಸುವುದಿಲ್ಲವೆಂದರೆ, ಕೊಡಗು ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವಲ್ಲವೆ? Whether we are still a separate, free state? That the Minister should tell us. Whether we have merged with State of Karnataka? whether we have a separate entity still now? That the Minister or the Government should tell us. 1964ನೇ ಆಕ್ಟ್ ಏನಿದೆ ಅದು ಕರ್ನಾಟಕದ ಎಲ್ಲಾ ಜಿಲ್ಲೆಗೆ ಅನ್ವಯವಾಗುತ್ತದೆ. ಈ ಆಕ್ಟ್ ಕೊಡಗಿಗೆ ಅನ್ವಯಿಸುವುದಿಲ್ಲವೆಂದರೆ ನನಗೆ ಅರ್ಥವಾಗುವುದಿಲ್ಲ. ಯಾವ ರೀತಿಯಲ್ಲಿ ನಾವು, ಈ ಕೊಡಗು ಕರ್ನಾಟಕದ ಅವಿಭಾಜ್ಯ ಅಂಗ ಎಂದು ಹೇಳುವ ವಿಚಾರದಲ್ಲಿ ನೀವೇ ಸೃಷ್ಟಿ ಮಾಡುತ್ತಿದ್ದೀರೋ ಅಥವಾ ನಮ್ಮನ್ನು ದೂರು ಮಾಡುವುದಕ್ಕೆ ನೀವು ಪ್ರಯತ್ನ ಪಡುತ್ತಿದ್ದೀರೋ ನನಗಂತೂ ಕೂಡ ಅರ್ಥವಾಗುವುದಿಲ್ಲ. ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರೊಡನೆ ನಾನು ಸುದೀರ್ಘವಾಗಿ ಚರ್ಚೆ ಮಾಡಿದ್ದೆ. ಮತ್ತು ಎರಡು ವಿಷಯಗಳ ಬಗ್ಗೆ ಅವರು ಸಂಪುಟದಲ್ಲಿ ನಿರ್ಣಯ ಮಾಡಿ ಸರ್ಕಾರದ ಆದೇಶವನ್ನು ಹೊರಡಿಸಿದ್ದಾರೆ. ಒಂದು ದಿನಾಂಕ: 6ನೇ ಆಗಸ್ಟ್ 1999, ಅದು ಕ್ಯಾಬಿನೆಟ್ ಡಿಸೀಷನ್,

ನಂಬರ್ ಸಿ 60 ಸಿ 96 ದಿನಾಂಕ: 22-01-96 ರಲ್ಲಿ ಒಂದು ಆಜ್ಞೆ ಹೊರಡಿಸಿದ್ದಾರೆ. ಇನ್ನೊಂದು ದಿನಾಂಕ 22ನೇ ಸೆಪ್ಟೆಂಬರ್ 1999 ಅದು ನಾನು ರಿಟ್ ಪಿಟಿಷನ್ ಏನು ಓದಿದೆ 39:49 ಆಫ್ 1988 ಇದರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಚರ್ಚೆ ಮಾಡಿದ್ದಾರೆ. ಸರ್ಕಾರದ ಅಧಿಕಾರಿಗಳು ಕೊಡಗಿಗೆ ಹೋಗಿದ್ದಾರೆ. ಸುದೀರ್ಘವಾಗಿ ಅರಣ್ಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದಾರೆ. ಚರ್ಚೆ ಮಾಡಿದ ಮೇಲೆ ಸೋಮವಾರಪೇಟೆಯಲ್ಲಿ ಚಿತ್ರದುರ್ಗ ಮಠಕ್ಕೆ ಸೇರಿದಂತಹ ಬೇಕಾದಷ್ಟು ಜಾಗವಿದೆ. ಅದರ ಬಗ್ಗೆ ಏನು tribunal ನಲ್ಲಿ ಆ ಜಾಗವನ್ನು ಕನ್‌ಫರ್ಮ್ ಮಾಡಿದ್ದರು ಅದರ ಮೇಲೆ ಸರ್ಕಾರ ಹೈಕೋರ್ಟ್‌ಗೆ ಅಪೀಲು ಮಾಡಿದರು. ಆದರೆ ಈ ಜಡ್ಜ್‌ಮೆಂಟ್ ಆದಮೇಲೆ ಕ್ಯಾಬಿನೆಟ್ ಡಿಸ್‌ಕಷನ್ ಆಗಿದೆ.

ಅಧ್ಯಕ್ಷರು: ಮಾನ್ಯ ಜೀವಿಜಯರವರೆ, ತಾವು ಬೇಗ ಮುಗಿಸಬೇಕು.

ಶ್ರೀ ಬಿ.ಎ. ಜೀವಿಜಯ: ಮಾನ್ಯ ಅಧ್ಯಕ್ಷರೆ, ಇದು ಬಹಳ ಜ್ವಲಂತ ಸಮಸ್ಯೆ. ನೀವು ಬೇಗ ಮುಗಿಸಬೇಕು ಎಂದು ಹೇಳುವುದು ನನಗೆ ಅರ್ಥವಾಗುತ್ತದೆ. ಆದರೆ ನಾವೇನು ಮಾಡಬೇಕು? ಕೊಡಗಿನವರು ಇರಬೇಕಾ ಸಾಯಬೇಕಾ? ಮತ್ತೆ ನಮ್ಮನ್ನು ಅರಬ್ಬಿ ಸಮುದ್ರಕ್ಕೆ ಎತ್ತಿ ಹಾಕುತ್ತಾರೆ. Are we not part and parcel of Karnataka? If they have decided 1964 Karnataka Land Regulation do not apply for Coorg? ಮಂಡ್ಯದಲ್ಲಿ ಮರ ಕಡಿಯಬಹುದು, ಚಿಕ್ಕಮಗಳೂರಿನಲ್ಲಿ ಮರ ಕಡಿಯಬಹುದು, ನಮಗೆ ಒಂದು ಕಾನೂನು, ಅವರಿಗೆ ಒಂದು ಕಾನೂನೆ? ಇದೇನಿದು? ಈ ಪ್ರಜಾಪ್ರಭುತ್ವದಲ್ಲಿ ನಮ್ಮ ಕಾನ್ಸ್‌ಟಿಟ್ಯೂಷನ್ ಎಷ್ಟು ಬಾರಿ ಅಮೆಂಡ್‌ಮೆಂಟ್ ಆಯಿತು? 94 ಹಾಗೂ 95 ಸಲ ಕಾನ್ಸ್‌ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗಿದೆ. ಬ್ರಿಟೀಷರು ಮಾಡಿದಂತಹ ಕಾನೂನನ್ನೇ ಈ ದಿವಸ ಇನ್ನೂ ಅಪ್ಲೈ ಮಾಡುವುದಾದರೆ Why are we here for? ನಾವು ಏಕೆ ಬೇಕು ಈ ಕರ್ನಾಟಕ ರಾಜ್ಯದಲ್ಲಿ? ನಮ್ಮನ್ನು ಬೇರೆಯವರು ಎಂದು ನೀವು ತಿರಸ್ಕಾರ ಮಾಡುತ್ತೀರಿ? ಅಷ್ಟು ನೋವಿನಿಂದ ಹೇಳಬೇಕಾಗುತ್ತದೆ. We have become second class citizens in Karnataka.

ಆಗ ಗೌವರ್ನ್‌ಮೆಂಟ್ ಒಂದು ಹೇಳಿದೆ:-

> " The Government has decided to withdraw the writ petition filed by the Government against the order of the Land Tribunal confirming the occupancy right on the holders of the privileged Jahagir Bane land belong to the Mahadevapur Mutt of Bevinabasavanahalli village, Machahalli of Jamboor village......"

ಬೇಕಾದರೆ ನಾನು ಮಂತ್ರಿಗಳಿಗೆ ಕೊಡುತ್ತೇನೆ. They have confirmed the rights to Chitradurga Mutt, which is looking after the property of this Mahadevapura Mutt. ಅದರ ಜೊತೆಗೆ ಬಹಳ ಸುದೀರ್ಘವಾದ ಚರ್ಚೆ ಕ್ಯಾಬಿನೆಟ್‌ನಲ್ಲಿ ನಡೆದಿದೆ. ಆದರೆ ನೀವು ಚರ್ಚೆ ಮಾಡುವುದಕ್ಕೆ ಸಾಕಷ್ಟು ಸಮಯ ಇಲ್ಲವೆಂದು ಹೇಳಿದ್ದೀರಿ. ಇದು ಕ್ಯಾಬಿನೆಟ್ ಡಿಸೀಷನ್. ಮಾನ್ಯ ಜೆ.ಹೆಚ್. ಪಟೇಲರ ಸರ್ಕಾರದಲ್ಲಿ ಮಾನ್ಯ ಸೋಮಶೇಖರ್‌ರವರು ಕಂದಾಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಸಚಿವ ಸಂಪುಟದಲ್ಲಿ ಆದಂತಹ ನಿರ್ಧಾರವನ್ನು ಕೊಡಗಿನ ಡೆಪ್ಯುಟಿ ಕಮಿಷನರ್‌ಗೆ ಕಳುಹಿಸಿಕೊಟ್ಟಿದೆ. ಅದರಲ್ಲೆ ಏನು ಹೇಳುತ್ತಾರೆ ಎಂದರೆ,

"The erstwhile Coorg Land Revenue Regulation, 1899 repealed by Section 202 of Karnataka Land Revenue Act, Serial No.15 of the Schedule, which were hitherto being used, should be discontinued forthwith and all the provisions of the Karnataka Revenue Act, 1964 as amened from time to time, rules made thereunder and other Government Orders, notifications, etc., issued thereunder should be made applicable to the Kodagu District. the RTC in Form No. 16 as prescribed under Karnataka Land Revenue Rules, the Karnataka Land Grants should be introduced." ಇದು ಸ್ಪಷ್ಟವಾಗಿ ಸರ್ಕಾರ ಹೇಳಿದೆ. ಆದರೂ ಕೂಡ ಕೊಡಗು ವಿಷಯ ಪ್ರಸ್ತಾವನೆಗೆ ಬಂದಾಗ ನಾನು ಮೊದಲೇ ಹೇಳಿದ ಹಾಗೆ ಸ್ವಾತಂತ್ರ್ಯ ಬಂದಮೇಲೆ 1956ನೇ ಇಸವಿಯಲ್ಲಿ ನಾವು ಸೇರಿದಮೇಲೆ, 1964ನೇ ಇಸವಿಯ ಕರ್ನಾಟಕ ಕಂದಾಯ ಕಾನೂನು, ಮತ್ತು 1963ರ ಕರ್ನಾಟಕ ಅರಣ್ಯ ಕಾನೂನು ಹಿಂದೆ ಜಾರಿಯಲ್ಲಿ ಇತ್ತು, ಇವೆರಡೂ ಕಾನೂನು ಜಾರಿಗೆ ಬಂದಮೇಲೆ, ಇವೆರಡೂ ಕಾನೂನುಗಳು ಸತ್ತುಹೋಗಿದೆ. ಇದರಿಂದ ಏನಾಗಿದೆ ಎಂದರೆ ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಕರ್ನಾಟಕದ ಕಾನೂನಿನಲ್ಲಿ ನೀಡಿದ ಅಧಿಕೃತವಾದ ರೀತಿಯಲ್ಲಿ ಇರುವ ಕಾನೂನು ಚಲಾಯಿಸಬೇಕೇ ಹೊರತು, ಹಿಂದಿನ ಕಾನೂನಿಗೆ ಅನುಗುಣವಾಗಿ ಅದನ್ನು ಚಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಇಷ್ಟೆಲ್ಲಾ ಕ್ಯಾಬಿನೇಟ್ ಡಿಸೀಷನ್ ಆದರೂ ಕೂಡ ಸೆಕ್ಷನ್ 202 ಏನು ಹೇಳುತ್ತದೆಂದರೆ:-

"Repeal and savings.-(1) The enactments specified in the schedule, and any other law corresponding to this Act are hereby repealed;

provided that subject to the provisions of this Act, the repeal shall not affect-

(a) the previous operation of any such enactment or law or anything duly done or suffered the reunder;

(b) any right, privilege, obligation or liability acquired, accrued or incurred under such enactment or law;

(c) any penalty, forfeiture or punishment incurred in respect of any offence committed against such enactment or law;

(d) any investigation, legal proceeding or remedy in respect of such right, privilege, obligation, liability, penalty, forfeiture or punishment as aforesaid;

> and any such investigations, legal proceeding or remedy may be instituted or enforced and any such penalty, forfeiture, or punishment may be imposed as if such enactment of law had not been repealed."

ಎಂದು ಹೇಳುವಂಥಾದ್ದು. ಇದನ್ನು ನಮ್ಮ ಕಂದಾಯ ಮಂತ್ರಿಯವರು ಓದಬಹುದು. 202 ಸೆಕ್ಷನ್ of Karnataka Land Revenue Act ಅವರಿಗೆ ಎಲ್ಲಾ ಅರ್ಥವಾಗುತ್ತದೆ. ನಾನು ಈ ದಿವಸ ಕೇಳುವಂಥಾದ್ದು ಇಷ್ಟೆ. ನಾವು ಕರ್ನಾಟಕಕ್ಕೆ ವಿಲೀನವಾಗಿದ್ದೇವೆ. ಗತಕಾಲದಲ್ಲಿ ಬ್ರಿಟಿಷರು ಏನು ಒಂದು ಕಾನೂನನ್ನು ಮಾಡಿದ್ದರು, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಆ ಗತಕಾಲದ ಕಾನೂನು ಇನ್ನೂ ಕೂಡ ಮುಂದುವರೆಸಿಕೊಂಡು ಬರಬೇಕೆಂದು ಏನು ಒಂದು ಪ್ರಸ್ತಾವನೆಯನ್ನು ಮಾಡುತ್ತಿದ್ದಾರೆ ಅಧಿಕಾರಿಗಳು Ignorantly or by design, I cannot understand. ಕೂಡಲೇ ಇದನ್ನು ಮಾಡಬೇಕು ಏಕೆಂದರೆ ಕರ್ನಾಟಕ ಕ್ಯಾಬಿನೇಟ್ ಆಗ ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರ ಮಂತ್ರಿಮಂಡಲವು ಏನು ಒಂದು ತೀರ್ಮಾನವನ್ನು ತೆಗೆದುಕೊಂಡಿದೆ, ಅದನ್ನು ಶೀಘ್ರವಾಗಿ ಜಾರಿಗೆ ತರಲೇಬೇಕು, ಏಕೆಂದರೆ ಈ ಆಕ್ಟ್ ಆದಮೇಲೆ, ನಮಗೆ ಮುಖ್ಯವಾಗಿ ಇರುವಂತಹ ಪ್ರಶ್ನೆ, ಮರಗಳ ಮೇಲೆ ಇರುವಂತಹ ಹಕ್ಕು. ಅದರಲ್ಲಿ ಸೆಕ್ಷನ್ 75 ಏನು ಹೇಳುತ್ತದೆಂದರೆ– Rights to trees in a village in which survey settlement has been introduced-

> "In any village or portions of the village, if the original survey settlement has been completed before the commencement of this Act, the right of the State Government to all trees in any land, except the trees reserved by the State Government or by any Survey Officer, whether by express order made at or about the time of such settlement or by notification made and published at or any time after such settlement shall be deemed to have conseded to the occupant."

ಇದು ಇಡೀ ಕರ್ನಾಟಕಕ್ಕೆ ಅನ್ವಯವಾಗುತ್ತದೆ. But the stand taken by the department, ಮಂತ್ರಿಮಂಡಲದಲ್ಲಿ ಇದು ತೀರ್ಮಾನವಾದ ಮೇಲೆ, ಅದನ್ನು ವಯಲೇಟ್ ಮಾಡತಕ್ಕಂಥದ್ದು. If they have that temerity to challenge the cabinet decision, I can't understand whether this government exists or not. ಇದು ಬಹಳ ಜ್ವಲಂತ ಸಮಸ್ಯೆಯಾಗಿದೆ. ಈಗ ಇದು ಏನಾಗಿದೆ, ಚಿಕ್ಕಮಗಳೂರಿನಲ್ಲಿ ನಕ್ಸಲೀಯರು ಏನು ಮಾಡುತ್ತಿದ್ದಾರೆ. ಅಲ್ಲಿ ಕುದುರೆಮುಖದಲ್ಲಿರುವಂತಹ " ಗೌಡ್ಲು" ಟ್ರೈಬ್ಸ್ ಇದ್ದರು. ಅವರನ್ನು ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸಿದರು. ಅಲ್ಲಿ ಸಹಸ್ರಾರು ವರ್ಷಗಳಿಂದ ಅವರು ವಾಸ ಮಾಡುತ್ತಿದ್ದರು. ಈಗ ನಕ್ಸಲರ ಪ್ರಾಬ್ಲಂ ಪ್ರಾರಂಭವಾಗಿದೆ. ಈಗ ಕೊಡಗಿನವರು ಸಪರೇಟ್ ಆಗಬೇಕೆಂದು ಚಳುವಳಿಯನ್ನು ಮಾಡುತ್ತಿದ್ದಾರೆ. ಕಾವೇರಿ ಸೇನೆ ಪ್ರಾರಂಭವಾಗಿದೆ. If you are to say that these rules still apply then you are admitting that a separate State of Coorg exists.

ನಾವು ಕರ್ನಾಟಕದಿಂದ ಹೊರಗೆ ಇರಬೇಕೆಂಬ ತೀರ್ಮಾನವನ್ನು ಕೊಡುತ್ತಿರೋ ಅಥವಾ ಕರ್ನಾಟಕದಲ್ಲಿ ಇರಬೇಕೆಂದು ಹೇಳುತ್ತಿರೋ ಈ ಸುವರ್ಣ ಮಹೋತ್ಸವದ ಆಚರಣೆಯಲ್ಲಿ ನಮ್ಮನ್ನು ಸೇರಿಸಿಕೊಳ್ಳಬೇಕೆಂದು ಇದ್ದಿರೋ ಹೇಗೆ ಎಂಬ ಪ್ರಶ್ನೆಯನ್ನು ನಾನು ಕೇಳಲಿಚ್ಛಿಸುತ್ತೇನೆ. ನಮ್ಮ ಕಂದಾಯ ಸಚಿವರಿಗೆ ಇದನ್ನು ಬಗೆಹರಿಸುವಂಥಾದ್ದಕ್ಕೆ ಏನೂ ಕಷ್ಟವಾಗುವುದಿಲ್ಲ. This need not go to Forest Department at all. ಇದು ಏಕೆ ಹೋಗಬೇಕು? ಇದು ಕ್ಯಾಬಿನೇಟ್‌ನಲ್ಲಿ ಡಿಸಿಷನ್ ಆಗಿದೆ. There is a provision to remove difficulties that arise in giving effect to these provisions in any area of the State under Section 201, i.e. power to remove difficulties.

It reads thus:

> "If any difficulty arises in giving effect to the provisions of this Act, in any area of the State, in consequence of the transition of the said provisions from the provisions of any enactment or law in force, in such area immediately before the commencement of this Act, the State Government may, by notification, make such provisions as appear to it to be necessary or expedient for removing the difficulty." Removing the difficulty

ಕೂಡ, ಸೆಕ್ಷನ್‌ನಲ್ಲಿ ಕೊಟ್ಟಿದ್ದಾರೆ. ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ನಾವು ಕೂಡ ಕರ್ನಾಟಕದಲ್ಲಿ ಅವಿಭಾಜ್ಯ ಅಂಗವಾಗಿದ್ದೇವೆ. ಆದುದರಿಂದ ಇಲ್ಲಿ ಕರ್ನಾಟಕದಲ್ಲಿ ಕೊಡಗಿಗೆ ಒಂದು ಕಾನೂನು, ಕರ್ನಾಟಕದ ಇತರ ಪ್ರದೇಶಗಳಿಗೆ ಬೇರೆ ಕಾನೂನು ಇರುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಮಂಡ್ಯದಲ್ಲಿ ಮರವನ್ನು ಕಡಿಯಬಹುದು, ಚಿಕ್ಕಮಗಳೂರಿನಲ್ಲಿ ಮರವನ್ನು ಕಡಿಯಬಹುದು, ಪಕ್ಕದ ಹಾಸನದಲ್ಲಿ ಮರವನ್ನು ಕಡಿಯಬಹುದು, ನಾವು ಕೊಡಗಿನವರು ಮರವನ್ನು ಕಡಿಯುವುದಕ್ಕೆ ಹಕ್ಕಿಲ್ಲವೆಂದರೆ, ಇದು ಬಹಳ ಅತಿರೇಕದ ವಿಚಾರವಾಗುತ್ತದೆ. ಆದುದರಿಂದ ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರ ಸರ್ಕಾರದಲ್ಲಿ ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಸರ್ಕಾರವು ಕೊಡಗಿನ ಡೆಪ್ಯೂಟಿ ಕಮೀಷನರ್‌ರವರಿಗೆ ಕಳುಹಿಸಿದೆ. ಅದರ ಆಧಾರದ ಮೇಲೆ ಕೆಲವು ಜಡ್ಜ್‌ಮೆಂಟ್ ಕೂಡ ಡೆಪ್ಯೂಟಿ ಕಮೀಷನರ್‌ರವರು ಮಾಡಿದ್ದಾರೆ. ಪ್ರಾಬ್ಲಂ ಏನೆಂದರೆ ಹಿಂದೆ ಇದ್ದಂತಹ ಜಿಲ್ಲಾಧಿಕಾರಿಗಳಿಗೆ ಯಾವ ಒಂದು ಅರ್ಜಿಯನ್ನು ಕೊಟ್ಟರೂ ಕೂಡ ಅವರು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾ ಇರಲಿಲ್ಲ. ಅವರು ಏನು ಇದ್ದರೂ ರಾಜ್ಯ ಸರ್ಕಾರಕ್ಕೆ, Secretariat ಗೆ ಕಳುಹಿಸಿಬಿಡುತ್ತಿದ್ದರು. He was a glorified clerk. That is all. ಆದುದರಿಂದ ನಾನು ಮಾನ್ಯ ಕಂದಾಯ ಸಚಿವರನ್ನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಅವರು ಪ್ರಾಂಜ್ವಲ ಮನಸ್ಸಿನವರು, ಅನುಭವಿಗಳು, ಅವರು ರಾಜಕೀಯದಲ್ಲಿ ಮಾಗಿದವರು, ಈಗ ಕೊಡಗಿನವರಿಗೆ ಜ್ವಲಂತ ಸಮಸ್ಯೆ ಉದ್ಭವವಾಗಿದೆ. ಈ ದಿವಸ ಒಂದು ಕ್ಷೋಭೆ ಬರುವಂತಹ ಪರಿಸ್ಥಿತಿ ಉದ್ಭವವಾಗಿದೆ. You must read the writing on the wall. You must be a visionary. ಇದನ್ನು ಹೀಗೆ ಬಿಡಬಾರದು. ಇದನ್ನು ಹಾಗೆ ಬಿಟ್ಟರೆ, ಇದರಿಂದ ಬಹಳ ಗಂಡಾಂತರ ಕಾದಿದೆ. ಆದುದರಿಂದ ದಯಮಾಡಿ ನಮ್ಮ ಕೊಡಗಿನವರಿಗೆ ಆಸ್ತಿಯ ಮೇಲೆ ಹಕ್ಕನ್ನು ಕೊಟ್ಟಿದ್ದೀರಿ, ಇದರ ಜೊತೆಗೆ ಮರಗಳ ಹಕ್ಕು ಕೂಡ ಸಂಪೂರ್ಣ ಜಾರಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ, ನಿವೇದನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಜೀವಿಜಯರವರೆ, ತಮ್ಮ ಭಾಷಣ ಆಯಿತಾ? ತಾವು ಬೇಗ ಮುಗಿಸಿ, ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಬಿ.ಎ. ಜೀವಿಜಯ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಅರಣ್ಯ ಸಚಿವರು ಇಲ್ಲಿ ಇಲ್ಲ. ಇದನ್ನು ನಾನು ಮಾನ್ಯ ಕಂದಾಯ ಮಂತ್ರಿಯವರಿಗೆ ಹೇಳುತ್ತೇನೆ. ಕೊಡಗಿನಲ್ಲಿ Thirtysix tenures ಇದೆ. ಇದರ ಬಗ್ಗೆ ಅರ್ಥ ಮಾಡಿಕೊಳ್ಳಲು ಬಾರೀ ಕಷ್ಟವಾಯಿತೆಂಬ ಮಾತನ್ನು ಹೈಕೋರ್ಟ್‌ನವರು ಹೇಳಿದ್ದಾರೆ. ಇಲ್ಲಿ ಕೊಡಗಿನಲ್ಲಿ "ಜಮ್ಮಮಲೈ" ಎಂದು ಇದೆ. ನಾನು ಅರಣ್ಯ ಮಂತ್ರಿಯಾಗಿದ್ದಂತಹ ಸಮಯದಲ್ಲಿ, ಪ್ರತಿಯೊಂದು "ಜಮ್ಮಮಲೈ"ಗೆ ಹೋಗಿದ್ದೇನೆ. ಇಲ್ಲಿ ಒಂದೊಂದು ಮರ ಹೆಚ್ಚು ಕಡಿಮೆ 50 ರಿಂದ 60 ಕ್ಯೂಬಿಕ್ ಮೀಟರ್ ಇರುವಂತಹ ಮರಗಳು ಇವೆ. ಈಗ ಕೊಡಗು ಜಿಲ್ಲೆಯಲ್ಲಿ "ಜಮ್ಮಾಮಲೈ ಅಸೋಸಿಯೇಷನ್ ಮತ್ತು Wild Life ಸೊಸೈಟಿಯವರು ಒಂದು ನಿವೇದನೆಯನ್ನು ಮಾಡಿಕೊಂಡಿದ್ದಾರೆ. ನಾವು ಪರಿಸರವನ್ನು ಕಾಪಾಡಿಕೊಳ್ಳಬೇಕು. ಆದುದರಿಂದ ಜಮ್ಮಾಮಲೈಯನ್ನು ನಾವು ನಿಮಗೆ ಬಿಟ್ಟು ಕೊಡುತ್ತೇವೆ. ಅದು 7,841 ಎಕರೆ ಇದೆ, ಇದನ್ನು ಸರ್ಕಾರಕ್ಕೆ ಬಿಟ್ಟು ಕೊಡುತ್ತೇವೆಂದು ಹೇಳಿದ್ದಾರೆ. ಅವರು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಇದನ್ನು ಅರಣ್ಯ ಇಲಾಖೆಯಲ್ಲಿ ಪರಿಶೀಲನೆಯನ್ನು ಮಾಡಿ, ಅವರು ಒಂದು ಎಕರೆಗೆ ಒಂಬತ್ತು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ ಎಸ್ಟಿಮೇಟ್ ಅನ್ನು ಮಾಡಿದ್ದಾರೆ. ಅವರ ಅಧಿಕಾರಿಗಳು ಇದನ್ನು recommend ಮಾಡಿದ್ದಾರೆ. ಇದನ್ನು ತೆಗೆದುಕೊಳ್ಳಬಹುದು. ಇದಕ್ಕೆ ಒಂದು ಲಕ್ಷದ ನಲವತ್ತು ಸಾವಿರ ರೂಪಾಯಿಗಳಂತೆ ಒಂದು ಹೆಕ್ಟಾರ್‌ಗೆ ಕೊಡಬಹುದು, net product value ಅದು ಏನು ಅರಣ್ಯ ಇಲಾಖೆಯಲ್ಲಿ ಇದೆ, ಅದನ್ನು ಕೊಟ್ಟು, ನಾವು ಇದನ್ನು ಸ್ವಾಧೀನ ಮಾಡಿಕೊಳ್ಳಬಹುದೆಂದು, ಹೇಳುವಂತಹ ಮಾತನ್ನು ಅವರು ಹೇಳಿದ್ದಾರೆ. ಆದ್ದರಿಂದ ಈಗ Japanese bank of International co-operation ಅದರಲ್ಲಿ ಬೇಕಾದಷ್ಟು ಹಣವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಕಳೆದ ಸಲ 761 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ನಮ್ಮ ಮಾನ್ಯ ಬಿ.ಆರ್. ಪಾಟೀಲರಿಗೆ ಉತ್ತರ ಕೊಡಬೇಕಾದರೆ ಅದರಲ್ಲಿ ನಿಜವಾಗಿ ಸಮಂಜಸವಾದ ಉತ್ತರ ಸಿಗಲಿಲ್ಲ. ಒಂದು ಕಡೆ Private ನವರು ಇದನ್ನು 3 ಲಕ್ಷ ಎಕರೆಯನ್ನು ಮಾಡಿದ್ದೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಸರ್ಕಾರದವರು 2 ಲಕ್ಷ ಎಕರೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಪುನಃ Japanese bank of International co-operation ಪುನಃ ನಾಳೆ ಬರುತ್ತಿದೆ. ಅದರಲ್ಲಿ ಸರ್ಕಾರ ಅರಣ್ಯ ಬೆಳೆಯುತ್ತದೆ. ಆದರೆ ಈಗ ಏನು ಜಮ್ಮಾಮಲೈಯವರು ಕೊಡತಕ್ಕಂಥ ಅರಣ್ಯ ಇದನ್ನು ನೋಡುವುದಕ್ಕೆ ಯಾರಾದರೂ ನನ್ನ ಜೊತೆಗೆ ಬನ್ನಿ. ನೀವು ಹೋಗಿ ನೋಡಬೇಕು ಮಾನ್ಯ ಅಧ್ಯಕ್ಷರೆ, ಅತ್ಯಂತ ಭೀಷಣವಾದ ಅರಣ್ಯವಾಗಿದೆ. ಅಲ್ಲಿ ಕೆಳಗೆ ನೋಡಿದರೆ ಬಿಸಿಲಿನ ನೆರಳು ಸಹ ಬೀಳುವುದಿಲ್ಲ. ಅಂಥ 7841 ಎಕರೆಯನ್ನು ನಿಮಗೆ ಕೊಡುತ್ತೇವೆಂದು ಸರ್ಕಾರಕ್ಕೆ ಬರೆದರು. ಸರ್ಕಾರದಲ್ಲಿ ಕೂಡ ಅರಣ್ಯ ಇಲಾಖೆಯವರು ಒಪ್ಪಿದ್ದಾರೆ. ಇದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಅವರು ಕೊಡತಕ್ಕಂತ compensation ಅನ್ನು ಒಂದು lump sum ನಲ್ಲಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಕೊಡಗಿನಲ್ಲಿ ಕಳೆದ 2–3 ದಿವಸಗಳಿಂದ ಕುಂಭದ್ರೋಣ ಮಳೆ ಬಹಳ ಭೀಷಣವಾಗಿ ಸುರಿಯುತ್ತಿದೆ. ನಾನು ಇರತಕ್ಕಂಥ ಸ್ಥಳದಲ್ಲಿ 3 ದಿವಸಕ್ಕೆ 30 ಇಂಚು ಮಳೆಯಾಗಿದೆ. ಇವತ್ತು Disastrous Managementಗೆ

Deputy Commissioner ರವರು ಹೋಗಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಎರಡು ಅಣೆಕಟ್ಟೆಗಳು ಇವೆ. ಆ ಎರಡು ಅಣೆಕಟ್ಟೆಗಳಿಂದ ಕೆ.ಆರ್.ಎಸ್. ಗೆ ನೀರು ಹರಿದುಬರುತ್ತಿದೆ. ನಮ್ಮ ಕೊಡಗಿನಲ್ಲಿ ಮಡಿಕೇರಿ ಇರಬಹುದು, ವೀರಾಜಪೇಟೆ ಇರಬಹುದು, ಅಥವಾ ನಮ್ಮ ಸೋಮವಾರಪೇಟೆ ಇರಬಹುದು. ಪುಷ್ಪಗಿರಿ ತಪ್ಪಲಿನಲ್ಲಿ ಮೊನ್ನೆ ಒಂದೇ ದಿವಸಕ್ಕೆ 40 ಸೆಂಟಿ ಮೀಟರ್ ಮಳೆ ಬಿದ್ದಿದೆ. ನಮ್ಮ ಕೊಡಗಿನಲ್ಲಿರುವ ರಸ್ತೆಗಳೆಲ್ಲಾ ಬಹಳ ಹಾಳಾಗಿದೆ. ಕಳೆದ ಸಲ ಕೂಡ 15 ಕೋಟಿ ರೂ.ನಷ್ಟ ಆಗಿದೆ ಎಂದು ನಾವು ಮಂತ್ರಿಗಳನ್ನು ಕೇಳಿದ್ದೆವು. ಅದು ಕೇಂದ್ರ ಸರ್ಕಾರಕ್ಕೆ 158 ಕೋಟಿ ರೂಪಾಯಿಗಳಿಗೆ ನಾವು ಪ್ರಸ್ತಾವನೆ ಕಳುಹಿಸಿದ್ದು ಅಲ್ಲಿಂದ ಒಂದು ಕಾಸು ಸಹ ಕೊಟ್ಟಿಲ್ಲವೆಂದು ಅವರು ಹೇಳಿದ್ದಾರೆ. ಕಳೆದ ಸಲ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟರು. ಆದರೆ ಈ ಸಲ ಅಣೆಕಟ್ಟುಗಳೆಲ್ಲಾ ತುಂಬಿವೆ. ತಮಿಳುನಾಡು ಮುಖ್ಯಮಂತ್ರಿಯವರಾದ ಕು. ಜಯಲಲಿತಾರವರು ಕಾವೇರಿ ನೀರು ಬಗ್ಗೆ ಪ್ರಸ್ತಾವನೆ ಮಾಡಿ ಹೋದಾಗ ನೀವು ನಾರಿಮನ್‌ಗೆ ಒಂದೊಂದು ದಿವಸಕ್ಕೆ ಎಷ್ಟೆಷ್ಟು ಲಕ್ಷ ರೂಪಾಯಿಗಳನ್ನು fee ರೂಪದಲ್ಲಿ ಕೊಡುತ್ತೀರಿ? ಎಷ್ಟು ಕೋಟಿ ರೂಪಾಯಿಗಳನ್ನು ಸರ್ಕಾರದಿಂದ fee ರೂಪದಲ್ಲಿ ಕೊಟ್ಟಿದ್ದೀರಿ? ಈಗ ಕೊಡಗಿನಲ್ಲಿ ಅಷ್ಟೆಲ್ಲಾ ರಸ್ತೆಗಳು ಹಾಳಾಗುತ್ತಿವೆ. ಕೊಡಗಿಗೆ ಹಣ ಕೊಡಲಿಕ್ಕೆ ನಿಮ್ಮಲ್ಲಿ ಇಲ್ಲವೇ? ಈ Natural Calamity ನಿಂದ ಕೇಂದ್ರ ಸರ್ಕಾರ ಕೊಡುವ ಹಣ ಅದು ಸಾಕಾಗುವುದಿಲ್ಲ ಎಂದು ಹೇಳಿದರು. ಆದ್ದರಿಂದ ಮಾನ್ಯ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ನಿಧಿಯಿಂದ ವಿಶೇಷವಾದ ಅನುದಾನ ಕೊಟ್ಟು ರಸ್ತೆಗಳ ದುರಸ್ತಿ ಮಾಡುವುದಕ್ಕೆ ನೀವು ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಏನು ಕೊಡಗಿನ ಜ್ವಲಂತ ಸಮಸ್ಯೆ ಇದೆ, ಆ ಜ್ವಲಂತ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಪ್ರಸ್ತಾವನೆಯನ್ನು ಮಾಡುತ್ತಿದ್ದೀರಿ ಎಂದು ಕೇಳಿದೆ. This has already been decided ಈಗಾಗಲೇ ನಿರ್ಣಯವಾಗಿದೆ. ಆದ್ದರಿಂದ ನೀವೇನಾದರೂ ಅರಣ್ಯ ಇಲಾಖೆಗೆ ಆ ಕಡತವನ್ನು ಕಳುಹಿಸಿದ್ದರೆ ಅರಣ್ಯ ಇಲಾಖೆಯಿಂದ ಪುನಃ ಕಡತವನ್ನು ತರಿಸಿಬಿಟ್ಟು ಇದನ್ನು ನೀವೇ ನಿರ್ಣಯ ಮಾಡಿ ಕೊಡಗಿನ ಜ್ವಲಂತ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನಷ್ಟು ಮಾತನಾಡಲಿಕ್ಕೆ ಇತ್ತು. ಆದರೆ ಸಮಯ ಇಲ್ಲವೆಂದು ಹೇಳಿರುವುದರಿಂದ, ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿ. ಬಹಳ ಬೇಗ ಮಾತನಾಡಿ ಮುಗಿಸಬೇಕು. ಆಮೇಲೆ ಮಾತನಾಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಆರಗ ಜ್ಞಾನೇಂದ್ರರವರು ಮಾತನಾಡುತ್ತಾರಂತೆ, ಅವರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ. ಅದರಲ್ಲೇನೂ ತಪ್ಪು ಇಲ್ಲ.

ಶ್ರೀ ಆರಗ ಜ್ಞಾನೇಂದ್ರ: ಅವರು ಮಾತನಾಡುವುದಕ್ಕೆ ನಾನೇನೂ ತಕರಾರು ಮಾಡಿಲ್ಲ. ನಾನು ಒಂದು ವಾರದಿಂದ ಇಷ್ಟೆಲ್ಲಾ ಹೊತ್ತುಕೊಂಡು ಬಂದು ಹೊತ್ತುಕೊಂಡು ಹೋಗುತ್ತಿದ್ದೆ. ನನ್ನನ್ನು ಮುಕ್ತಿಗೊಳಿಸಿ ಎಂದು ನಾನು ಹೇಳಿದ್ದೆ. ಅವರು ಹಿರಿಯರು ಸರ್. ಅವರು ಮಾತನಾಡಿ ಆದಮೇಲೆ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನನ್ನದೇನೂ ಅಭ್ಯಂತರವಿಲ್ಲ. ಅವರು ಮಾತನಾಡಲಿ. ನನ್ನ ಒಪ್ಪಿಗೆ ಇದೆ. ನೀವು ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರು ನನ್ನನ್ನು ಮಾತನಾಡಲು ಕರೆದರೆ ಮಾತನಾಡುತ್ತೇನೆ.

ಅಧ್ಯಕ್ಷರು: ಶ್ರೀ ಆರಗ ಜ್ಞಾನೇಂದ್ರರವರೆ, ತಾವು ಮಾತನಾಡಿ. ಇವರು ಮಾತನಾಡಿ ಆದಮೇಲೆ ತಮಗೆ ಅವಕಾಶ ಕೊಡತ್ತೇನೆ ಮಾನ್ಯ ವಾಟಾಳ್‌ರವರೆ. ಈಗ ಬೇಗ ಮುಗಿಸಬೇಕು ಮಾನ್ಯ ಜ್ಞಾನೇಂದ್ರರವರೆ. ನಿಮ್ಮ ಪಕ್ಷದ ಕಡೆಯಿಂದ ಬಹಳ ಜನ ಮಾತನಾಡುವುದಕ್ಕೆ ಕಾಯುತ್ತಿದ್ದಾರೆ. ನೀವು ಜಾಸ್ತಿ ಸಮಯ ತೆಗೆದುಕೊಂಡರೆ ಅವರ ಹಕ್ಕುಗಳು ಮೊಟಕಾಗಿಬಿಡುತ್ತದೆ. ಆದ್ದರಿಂದ ಬೇಗ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಹೇಗೆಂದರೆ, ಈ ರೂಲಿಂಗ್ ಪಾರ್ಟಿಯವರಿಗೆ ಅನೇಕ ಅವಕಾಶಗಳಿರುತ್ತವೆ. ಮಂತ್ರಿಗಳ ಜೊತೆಗೇ ಇರುತ್ತಾರೆ. ನೀವು ರೂಲಿಂಗ್ ಪಾರ್ಟಿಯವರಿಗೆ ಅವಕಾಶ ಕೊಟ್ಟರೆ...

ಶ್ರೀ ವಾಟಾಳ್ ನಾಗರಾಜ್: ನಾವು ಮುಂದಿನ ಬೆಂಚ್‌ನವರು ನಿಮ್ಮ ಕೆಂಗಣ್ಣಿಗೆ ಗುರಿಯಾಗಬೇಕಲ್ಲಾ ಎಂದು ಸ್ವಲ್ಪ ಭಯ ಬಿದ್ದು, ಹೋಗಲಿ ಎಂದು ನಾವು ಕುಳಿತುಕೊಂಡುಬಿಟ್ಟೆವು.

ಅಧ್ಯಕ್ಷರು: ಆಯಿತು. ಈಗ ಬೇಗ ಮಾತನಾಡಿ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಹಿರಿಯರು ಸರ್, ಅವರಿಗೆ ಕೆಣಕದೆ ಇನ್ನು ಯಾರಿಗೆ ನಾವು ಕೆಣಕಬೇಕು ಸರ್? ಮಾನ್ಯ ಅಧ್ಯಕ್ಷರೆ, ಈಗ ವಿಷಯಕ್ಕೆ ಬರುವುದಾದರೆ, ನಾನು ಮೊದಲನೆಯದಾಗಿ ರಾಜ್ಯದ ಇಂಧನ ಖಾತೆ ಬಗ್ಗೆ ಮಾತನಾಡುತ್ತಿದ್ದೇನೆ. ಅಧಿಕಾರಿಗಳು ಯಾರು ಬಂದಿದ್ದಾರೋ ಗೊತ್ತಿಲ್ಲ. ಸಚಿವರು ಸದನದಲ್ಲಿ ಇಲ್ಲ. ಹಾಗಾಗಿ ನಾನು ಮಾತನಾಡಿರತಕ್ಕಂಥದ್ದನ್ನು ಯಾರು ನೋಟ್ ಮಾಡಿಕೊಳ್ಳುತ್ತಾರೆ ಎನ್ನುವುದು ಗೊತ್ತಿಲ್ಲ. 'ನೀವಾದರೂ ಸ್ವಲ್ಪ ನೋಟು ಮಾಡಿಕೊಳ್ಳಿ' ಎಂದು ಈಗ ಪ್ರೆಸ್‌ನವರಿಗೆ ನಾನು ಕೈಮುಗಿಯಬೇಕಷ್ಟೆ. ಬೇರೆ ಇನ್ನೇನೂ ದಾರಿ ಕಾಣುವುದಿಲ್ಲ. ಏಕೆಂದರೆ ರಾಜಕೀಯ ಪರಿಸ್ಥಿತಿಗಳೇ ಹಾಗೆ ಆಗಿವೆ. ಇಲ್ಲಿ ವಿಧಾನಸೌಧಕ್ಕೆ ಬಂದರೂ ಕೂಡ ವಿಧಾನಸಭೆಗೆ ಬರದಿರುವಂಥ ಮಾನಸಿಕ ಸ್ಥಿತಿ ಇತ್ತೀಚೆಗೆ ನಿರ್ಮಾಣವಾಗಿದೆ. ಆದಷ್ಟು ಬೇಗ ಇದು ತಿಳಿಯಾಗಲಿ ಎಂದು ಹಾರೈಸೋಣ. ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಇಂಧನ ಬಗ್ಗೆ ಹೇಳುವುದಾದರೆ, ಜಲವಿದ್ಯುತ್ ಯೋಜನೆಗಳ ಮೇಲೆ ಅತ್ಯಧಿಕವಾಗಿ ನಾವು ಅವಲಂಬನೆಯಾಗಿದ್ದೇವೆ ಮತ್ತು ಇದು ಬಹಳ ಕಡಿಮೆ ವೆಚ್ಚದ ಇಂಧನ ಕೂಡ ಹೌದು. ಆದರೆ ಬಹಳ ವರ್ಷಗಳು ಇದರ ಮೇಲೆ ಅವಲಂಬಿತವಾಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ಮಾಡಲಿಕ್ಕೆ ಪರಿಸರದ ದೃಷ್ಟಿಯಿಂದ ಹಾನಿಯಾಗುತ್ತಿದೆ. ವಿಶೇಷವಾಗಿ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಹರಿಯುವ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಕಾಡುಗಳನ್ನು ನಾಶ ಮಾಡಿ ನಾವು ಜಲವಿದ್ಯುತ್ ಯೋಜನೆಗಳನ್ನು ತಯಾರು ಮಾಡಿದೆವು. ಅದರ ಪರಿಣಾಮವನ್ನೂ ಸಹ ಅನುಭವಿಸುತ್ತಿದ್ದೇವೆ. ಕಳೆದ 4 ವರ್ಷಗಳಿಂದ ಸತತವಾಗಿ ಮಳೆ ಇಲ್ಲದೆ ಬರ ಬಂದಿತ್ತು. ಇತ್ತೀಚಿನವರೆಗೆ ಮಳೆ ಇರಲಿಲ್ಲ. ಈಗ ಒಂದು ವಾರದಿಂದ ಕುಂಭದ್ರೋಣ ಮಳೆ ಎಂದು ಮಾನ್ಯ ಹಿರಿಯರಾದಂಥ ಜೀವಿಜಯರವರು ಹೇಳಿದ್ದಾರೆ. ಇವತ್ತು ಬೆಳಗ್ಗಿನಿಂದ ತೀರ್ಥಹಳ್ಳಿ ಆ ಭಾಗದಲ್ಲಿ ಮಳೆ ನಿಂತುಹೋಗಿದೆ. ಕೊಡಗಿನಲ್ಲಿ ಕುಂಭದ್ರೋಣ ಮಳೆ ಬಂದಿದೆ ಎಂದು ಅವರು ಹೇಳಬಹುದು. ಆದರೆ ಮಲೆನಾಡಿನ ಭಾಗವಾದ ನಮ್ಮ ತೀರ್ಥಹಳ್ಳಿಯಲ್ಲಿ ಹೇಳುವ ಹಾಗಿಲ್ಲ. ನಿನ್ನೆ ರಾತ್ರಿಯಿಂದ ಮಳೆ ನಿಂತುಹೋಗಿದೆ. ಹಾಗಾಗಿ ಒಳಹರಿವು ಕಳೆದ ಹತ್ತು

ವರ್ಷಗಳಿಂದ statistics ಅನ್ನು ತೆಗೆದು ನೋಡಿದಾಗ ಈ ಜಲವಿದ್ಯುತ್ ಯೋಜನೆಗಳ reservoir ಗೆ ಹರಿದು ಬರುವಂಥ ನೀರು 35 ಪರ್ಸೆಂಟ್ ಕಡಿಮೆಯಾಗಿದೆ. ಇದು ಆತಂಕಕ್ಕೆ ಒಳಪಡುವಂಥ ಒಂದು statistics ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿದ್ಯುತ್‌ನ ಉತ್ಪಾದನೆ ಏನಿದೆ, ಇದನ್ನು ಮಾಡಲಿಕ್ಕೆ ನಮ್ಮ ಸರ್ಕಾರಗಳು, ನಮ್ಮ ಇತ್ತೀಚೆಗೆ ರಾಜ್ಯದಲ್ಲಿ ಆಡಳಿತಕ್ಕೆ ಬಂದಂಥ ಜನ ಅದಕ್ಕೆ ಯೋಜನೆ ಮಾಡುತ್ತಿಲ್ಲ. ಇರುವಂಥ ವಿದ್ಯುತ್ ಅನ್ನು ಹೇಗೆ ವಿತರಣೆ ಮಾಡುವಂಥದ್ದು, ಇದರಲ್ಲಿಯೇ ಹೇಗೆ ಸರ್ಕಸ್ ಮಾಡುವಂಥದ್ದು, ಬೇರೆ ರಾಜ್ಯಗಳಿಂದ ತರುವುದು ಹೇಗೆ? ಇಂಥವುಗಳನ್ನು ಆಲೋಚನೆ ಮಾಡುತ್ತಿದ್ದೇವೆಯೇ ವಿನಃ ನಮ್ಮ ರಾಜ್ಯದಲ್ಲಿ ಭವಿಷ್ಯಕ್ಕೆ ಬೇಕಾಗಿರತಕ್ಕಂಥ ವಿದ್ಯುತ್ ಅನ್ನು ಉತ್ಪಾದನೆ ಮಾಡುವುದರ ಬಗ್ಗೆ ಬಹಳ ದೂರದೃಷ್ಟಿತ್ವದ ಯೋಜನೆಗಳು ಇವತ್ತು ತಯಾರಾಗುತ್ತಿಲ್ಲ. ಮಾನ್ಯ ರೇವಣ್ಣನವರು ಇದರ ಬಗ್ಗೆ ಕುಳಿತುಕೊಂಡು ಸಮಾಲೋಚನೆ ಮಾಡಿ ಏನಾದರೂ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅವರಿಗೆ ದೇವರು ಮುಂದೆ ಕೂಡ ಅವಕಾಶ ಕೊಡಲಿ ಎಂದು ನಾವು ಹಾರೈಸೋಣ. ಇವತ್ತು ಬಹಳ ದೊಡ್ಡ ದೊಡ್ಡ ವಿದ್ಯುತ್ ಯೋಜನೆಗಳು ಆಗಬೇಕಾಗಿತ್ತು. 2006ನೇ ಇಸವಿಗೆ ಎರಡು ಸಾವಿರ ಮೆಗಾ ವ್ಯಾಟ್ ವಿದ್ಯುತ್‌ನ ಕೊರತೆ ಬರುತ್ತದೆಂದು ಹೇಳುವಂಥದ್ದು ನಮ್ಮ ಮುಂದೆ statistics ಇದೆ. ಅದರಿಂದಾಗಿ ಇಷ್ಟು ಅಗಾಧವಾಗಿರುವ ಪ್ರಮಾಣದ ವಿದ್ಯುತ್ ಕೊರತೆಯನ್ನು ನಾವು ನಿವಾರಣೆ ಮಾಡಿಕೊಳ್ಳುವುದು ಹೇಗೆ? ಬೇರೆ ರಾಜ್ಯಗಳಿಂದ ತಂದರೆ ಅದರ ದರ ಜಾಸ್ತಿ ಇದೆ. ಆ ಜಾಸ್ತಿ ದರದ ವಿದ್ಯುತ್ ಅನ್ನು ನಮ್ಮವರಿಗೆ ಕೊಟ್ಟರೆ ಇವತ್ತು industry ಗಳು ಉದ್ಧಾರವಾಗುವುದಿಲ್ಲ. ರೈತರೂ ಕೂಡ ಉದ್ಧಾರವಾಗುವುದಿಲ್ಲ. ಸ್ವಾತಂತ್ರ್ಯ ಬಂದು 56–57 ವರ್ಷಗಳು ಗತಿಸಿದರೂ ಕೂಡ ನಮ್ಮ ಗ್ರಾಮೀಣ ಪ್ರದೇಶದ ರೈತ, ಸಾಮಾನ್ಯ ಜನ, ಕೃಷಿ ಕಾರ್ಮಿಕ, ಇವತ್ತೂ ಕೂಡ ಸೂರ್ಯ ಬೆಳಕನ್ನು ನಿಲ್ಲಿಸಿದ ನಂತರ ಚಿಮಿಣಿ ಬುಡ್ಡಿನಲ್ಲಿ ಬೆಳಕನ್ನು ಕಾಣಬೇಕಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಅವರನ್ನಿಟ್ಟಿದ್ದೇವೆ. ಗ್ರಾಮೀಣ ಪ್ರದೇಶದಲ್ಲಿ ವಿದ್ಯುದ್ದೀಕರಣ ಆಗಲಿಲ್ಲ. ಮೊನ್ನೆಯ ದಿನ ನಮ್ಮ ಮಂತ್ರಿಗಳು, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಹಿ ಹಾಕಿದ್ದಾರೆ. REC ಯೋಜನೆಗೆ ಸಹಿ ಹಾಕಿದ್ದಾರೆಂದು ಕೇಳಿ ನಮಗೆ ಬಹಳ ಸಂತೋಷವಾಯಿತು. ಏಕೆಂದರೆ ಇಷ್ಟು ಸಾವಿರಾರು ಹಳ್ಳಿಗಳನ್ನು ಈ ರೀತಿ ಅಂಧಕಾರದಲ್ಲಿಟ್ಟು ನಾವು ಪಟ್ಟಣಗಳಿಗೆ ವಿದ್ಯುತ್‌ನ್ನು ಒದಗಿಸಿ ನಾವು ಬಹಳ ಉದ್ಧಾರ ಮಾಡಿದ್ದೇವೆ, ಬಹಳ ಮುಂದೆ ಬಂದಿದ್ದೇವೆ, ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳಿಕೊಳ್ಳುವಂಥದ್ದು ಖಂಡಿತವಾಗಿಯೂ ಒಳ್ಳೆಯದಲ್ಲ. ಗ್ರಾಮೀಣ ಪ್ರದೇಶದ ಅಮಾಯಕ ಜನರಿಗೆ ಆ ವಿದ್ಯುತ್ ಅನ್ನು ಕೊಡುವಂಥ ಅವಶ್ಯಕತೆ ಇದೆ. ಇದನ್ನು ಸಾಧಿಸಬೇಕಾಗಿದೆ ಮತ್ತು ಅನೇಕ ಉದ್ಯಮಗಳು ಅದು ಬೆಂಗಳೂರು ಇರಬಹುದು ಅಥವಾ ಅದರ ಆಸುಪಾಸಿನಲ್ಲಿರಬಹುದು. IT ಉದ್ಯಮಗಳು, ಬೇರೆ ಬೇರೆ ಉದ್ಯಮಗಳು ನಾವು ಸರಿಯಾದ ವಿದ್ಯುತ್ ಅನ್ನು ಕೊಡದಿದ್ದರೆ ಸದ್ಯದಲ್ಲಿಯೇ ಇಲ್ಲಿಂದ ಸ್ಥಳ ಖಾಲಿ ಮಾಡುತ್ತಾರೆ. ಅದರಿಂದಾಗಿ ನಿಗದಿತವಾಗಿರತಕ್ಕಂಥ ವಿದ್ಯುತ್‌ನ್ನು ಅವರಿಗೆ ಸರಬರಾಜು ಮಾಡುವುದರ ಮೂಲಕ ನಮ್ಮ ರಾಜ್ಯದ ಆದಾಯವನ್ನು ಕೂಡ ಜಾಸ್ತಿ ಮಾಡಿಕೊಳ್ಳಬೇಕಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ರೈತರು ನಮ್ಮ ವಿದ್ಯುತ್ ಅನ್ನು ಅವಲಂಬಿಸಿ ನಾವು ಇವತ್ತು ತೋಟದ ಬೆಳೆಗಳನ್ನು ಮಾಡುತ್ತೇವೆ. ಭತ್ತ ಅಥವಾ ಇನ್ನಾವುದೋ ಬೆಳೆಯನ್ನು ಹಾಕಿದಾಗ ಒಂದು ಬೆಳೆಯನ್ನು ಹಾಕಿದಾಗ ಒಂದು ಬೆಳೆ ಹಾಳಾದರೆ ಇನ್ನೊಂದು ಬೆಳೆಯನ್ನಾದರೂ

ಬೆಳೆದು ತೆಗೆಯಬಹುದು. ಆದರೆ ನಾವು ತೋಟದ ಬೆಳೆಗಳನ್ನು ಹಾಕಿರತಕ್ಕಂಥವರು, ಇವರ ವಿದ್ಯುತ್ ಅನ್ನು ನಂಬಿ ಹಾಕಿರತಕ್ಕಂಥವರು ಒಂದು ಅಡಿಕೆ ತೋಟದಿಂದ ನಮಗೆ ಫಸಲು ಬರಬೇಕಾದರೆ ಹತ್ತು ವರ್ಷಗಳು ಬೇಕಾಗುತ್ತದೆ. ಒಂದು ವರ್ಷ ಕೂಡ ಅದಕ್ಕೆ ನೀರು ಇಲ್ಲ ವಿದ್ಯುತ್ ಕೊರತೆ ಆಯಿತೆಂದರೆ ಹತ್ತು ವರ್ಷ ಹಣ ಹಾಕಿ ಬೆಳೆಸಿದಂಥ ತೋಟ ಒಂದೇ ವರ್ಷ ನೀರು ಮತ್ತು ವಿದ್ಯುತ್ ಕೊರತೆಯಾದರೆ ಅದರಿಂದ ಸಂಪೂರ್ಣವಾಗಿ ನಮ್ಮ ಭವಿಷ್ಯ ಹಾಳಾಗುತ್ತದೆ. ಹಾಗಾಗಿ, ರೈತರ ಆತ್ಮಹತ್ಯೆಯ ಪ್ರಕರಣಗಳು ಕೂಡ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಇವತ್ತು 6 ಗಂಟೆ, 8 ಗಂಟೆ ವಿದ್ಯುತ್ ಸಿಗುತ್ತಿದೆ. ಈ ಸಾರಿ ಸ್ವಲ್ಪ ಪರವಾಗಿಲ್ಲ ಮಾನ್ಯ ರೇವಣ್ಣನವರೆ, ಕಳೆದ ಬೇಸಿಗೆಯಲ್ಲಿ 6 ಗಂಟೆನೇ ವಿದ್ಯುತ್ ಕೊಟ್ಟರೂ ಕೂಡ 6 ಗಂಟೆ ಕೊಟ್ಟಿದ್ದಾರೆ. ಅಷ್ಟರಮಟ್ಟಿಗೆ ನಾನು ಅವರಿಗೆ ಅಭಿನಂದನೆ ಹೇಳುತ್ತಿದ್ದೇನೆ. ಹೇಗೋ ಅಡ್ಜಸ್ಟ್ ಮಾಡಿಕೊಟ್ಟಿದ್ದಾರೆ. ಹಳ್ಳಿಯವರೂ ಕೂಡ, 6 ಗಂಟೆಯೋ, 4 ಗಂಟೆಯೋ ಸಿಕ್ಕಿದೆಯಪ್ಪ ಎಂದು ಹೇಳುವಂಥ ಪರಿಸ್ಥಿತಿ ಇದೆ. ಬಹುಶಃ ಹೀಗಾದರೆ ಪ್ರಯೋಜನವಾಗುವುದಿಲ್ಲ. ನಮಗೊಂದು 20 ಗಂಟೆ, 22 ಗಂಟೆಗಳ ಕಾಲವಾದರೂ ಕೂಡ ಸತತವಾಗಿ ಸಿಕ್ಕಿದರೆ ಇದರ ಮೂರು ಪಟ್ಟು ನಮ್ಮ ರೈತರು ಬೆಳೆ ಬೆಳೆದು ತೋರಿಸುತ್ತಾರೆ. ಅವರ ಆದಾಯ ಜಾಸ್ತಿಯಾಗುತ್ತದೆ. ಅವರ ಗೌರವದ ಬದುಕಿಗೆ ದೊಡ್ಡ ಶಕ್ತಿ ಬರುತ್ತದೆ. ಈ ಬಗ್ಗೆ ದೂರದರ್ಶಿತ್ವದ ಅನೇಕ ಯೋಜನೆಗಳು ಆಗಬೇಕಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದ ಒಟ್ಟಾರೆ ಬಳಕೆಯಾಗುವಂಥ ವಿದ್ಯುತ್ತಿನಲ್ಲಿ ಶೇಕಡಾ ಅರ್ಧಕ್ಕಿಂತ ಹೆಚ್ಚು ವಿದ್ಯುತ್ ಬೆಂಗಳೂರಿನಲ್ಲಿ ಬಳಕೆಯಾಗುತ್ತದೆ. ಆದರೆ, ಉತ್ಪಾದನೆ ಮಾಡತಕ್ಕಂಥದ್ದು ಎಲ್ಲಾ ಪ್ಲಾಂಟ್‌ಗಳೂ ಕೂಡ 400 ಕಿಲೋಮೀಟರ್‌ಗಿಂತ ದೂರ ಇವೆ. ಎಲ್ಲೋ ಬಳ್ಳಾರಿಯಲ್ಲಿ, ಎಲ್ಲೋ ಶರಾವತಿಯಲ್ಲಿ, ಎಲ್ಲೋ ರಾಯಚೂರಿನಲ್ಲಿ, ಅಲ್ಲಿಂದ ಇವತ್ತು ವಿದ್ಯುತ್ ಹರಿದು ಬೆಂಗಳೂರಿನಂಥ ನಗರಕ್ಕೆ ಬರಬೇಕಾಗಿದೆ. 400 ಕಿಲೋಮೀಟರ್ ಮಿನಿಮಂ, ಮ್ಯಾಗ್ಸಿಮಂ 600, 800 ಕಿಲೋಮೀಟರ್ ದೂರದಿಂದ ನಾವು ಲೈನ್ ಅನ್ನು ಹಾಕಿಕೊಂಡು ಬೆಂಗಳೂರಿಗೆ ತಂದು ವಿದ್ಯುತ್ ಅನ್ನು ಕೊಡಬೇಕಾಗಿದೆ. ಇವತ್ತು ಟ್ರಾನ್ಸ್‌ಮಿಷನ್ ಲಾಸ್ ಎಷ್ಟಾಗುತ್ತದೆ ಎನ್ನುವಂತದ್ದನ್ನೂ ಕೂಡ ಯೋಚನೆ ಮಾಡಬೇಕಾಗುತ್ತದೆ.ಇವತ್ತು ಬೇರೆ ಬೇರೆ ರಾಜ್ಯಗಳನ್ನು ತೆಗೆದುಕೊಳ್ಳಿ. ಆಂಧ್ರಪ್ರದೇಶದಲ್ಲಿ ಹೈದರಾಬಾದಿನ ಪಕ್ಕದಲ್ಲಿ, ಹೈದರಾಬಾದ್‌ಗೆ ಬೇಕಾದಂತ ವಿದ್ಯುತ್ ಅನ್ನು ಉತ್ಪಾದನೆ ಮಾಡುತ್ತಾರೆ. ತಮಿಳುನಾಡಿನಲ್ಲಿ ಮದ್ರಾಸ್‌ಗೆ ಬೇಕಾಗಿರತಕ್ಕಂಥ ವಿದ್ಯುತ್ ಅನ್ನು ಪಕ್ಕದಲ್ಲೇ ಉತ್ಪಾದನೆ ಮಾಡುತ್ತಾರೆ. ಆದರೆ, ನಮಗೆ ಏಕೋ ಗೊತ್ತಿಲ್ಲ, ಹಿಂದಿನವರೂ ಕೂಡ ಏನನ್ನೂ ಮಾಡಲಿಲ್ಲ. ಬೆಂಗಳೂರಿಗೆ ಅತ್ಯಧಿಕ ವಿದ್ಯುತ್ತಿನ ಬೇಡಿಕೆ ಏನಿತ್ತು, ಅದನ್ನು ಬೇರೆ ಕಡೆಯಿಂದ 400, 500 ಕಿಲೋಮೀಟರ್‌ನಿಂದ ತರುವಂಥದ್ದು ವೈಜ್ಞಾನಿಕ ಅಲ್ಲ, ಬುದ್ಧಿವಂತಿಕೆಯ ಲಕ್ಷಣವೂ ಅಲ್ಲ. ಇವತ್ತು ಬೆಂಗಳೂರಿಗೆ ಬೇಕಾಗಿರತಕ್ಕಂಥ ವಿದ್ಯುತ್ ಅನ್ನು ಬೆಂಗಳೂರಿನ ಪಕ್ಕದಲ್ಲೇ ಇದನ್ನು ತಯಾರು ಮಾಡುವ ಹಾಗೆ ವಿಶೇಷವಾಗಿರತಕ್ಕಂಥ ಒತ್ತನ್ನು ನಾವು ಕೊಡಬೇಕಾಗಿತ್ತು. ಆ ವತ್ತನ್ನು ಇವತ್ತು ಕೊಡಲಿಲ್ಲ. ಹಾಗಾಗಿ, ಇವತ್ತು ಸಾಗಾಣಿಕೆ ಮತ್ತು ಅದರ ವೆಚ್ಚದ ದೃಷ್ಟಿಯಿಂದ ಬಹಳ ದುಬಾರಿಯಾಗಿರತಕ್ಕಂಥ ಒಂದು ಪರಿಸ್ಥಿತಿ ಮತ್ತು ಟ್ರಾನ್ಸ್‌ಮಿಷನ್ ಲಾಸ್ ಕೂಡ ಸಿಕ್ಕಾಪಟ್ಟೆ ಆಗುತ್ತಿದೆ. ಇವತ್ತು ಬೇರೆ ಬೇರೆ ಮೂಲಗಳಿಂದ ವಿದ್ಯುತ್ ಅನ್ನು ಉತ್ಪಾದನೆ ಮಾಡುತ್ತಿದ್ದಾರೆ. ಗಾಳಿಯಿಂದ ನಮ್ಮ ಪಕ್ಕದ ತಮಿಳುನಾಡು 1200 ಮೆಗಾವ್ಯಾಟ್ ವಿದ್ಯುತ್ ಅನ್ನು ಇವತ್ತು ಉತ್ಪಾದನೆ ಮಾಡುತ್ತಿದೆ. ನಮ್ಮಲ್ಲಿ ಮೊನ್ನೆ ಮೊನ್ನೆಗೆ ಸುಮಾರು 200, 250 ಮೆಗಾವ್ಯಾಟ್‌ಗೆ ಮಂಜೂರಾತಿ

ಕೊಟ್ಟಿದ್ದೇವೆ. 1200 ಎಲ್ಲಿ ತಮಿಳುನಾಡಿನಲ್ಲಿ; ಕರ್ನಾಟಕ ಇವತ್ತು ನಮ್ಮ ವಿಜ್ಞಾನಿಗಳು, ನಮ್ಮ ಸಂಶೋಧಕರು ಸ್ಪಾಟ್ ಅನ್ನು ಗುರುತಿಸಿದ್ದಾರೆ. ಸುಮಾರು 1000 ಮೆಗಾವ್ಯಾಟ್ ವಿದ್ಯುತ್‌ಗಿಂತ ಜಾಸ್ತಿ ನಾವು ಗಾಳಿಯಲ್ಲಿ ಉತ್ಪಾದನೆ ಮಾಡಬಹುದೆಂದಾದರೂ ಕೂಡ ಈ ಬಗ್ಗೆ ಸರ್ಕಾರಕ್ಕೆ ಆಗದಿದ್ದರೂ ಕೂಡ ಖಾಸಗಿಯವರನ್ನು ಪ್ರೋತ್ಸಾಹಿಸಬೇಕು. ನನಗೆ ಇವತ್ತು ಮಹಾರಾಷ್ಟ್ರದಲ್ಲಿ ಬಹಳ ಸಂತೋಷ ಆಗುತ್ತದೆ. ತಾವು ಮಂತ್ರಿಗಳಾಗಿ ಅಧ್ಯಯನ ಮಾಡಿ. ಬೇರೆ ಬೇರೆ ಕಂಪನಿಗಳಿಗೆ ಹೇಳಿ. ಉದಾಹರಣೆಗೆ, ಗುಟ್ಕಾ ತಯಾರು ಮಾಡುವಂಥ ಕಂಪನಿಗಳೂ ಕೂಡ ಗಾಳಿ ವಿದ್ಯುತ್ ಅನ್ನು ತಯಾರು ಮಾಡುವಂಥ ಒಂದು ಪ್ಲಾಂಟ್ ಅನ್ನು ಹಾಕಿವೆ. ಬೇರೆ ಬೇರೆ ಸೋರ್ಸ್‌ನಿಂದ ವಿದ್ಯುತ್ ಅನ್ನು ತಯಾರು ಮಾಡಿ ನೀವು ಕೊಡುವಂಥ ಸೇಲ್ಸ್‌ಟ್ಯಾಕ್ಸ್‌ಗೆ ನಿಮಗೆ ರೀಬೇಟ್ ಕೊಡುತ್ತೇವೆ, ನಿಮ್ಮ ವಿದ್ಯುತ್ ಉತ್ಪಾದನಾ ಘಟಕಗಳನ್ನು ತಯಾರು ಮಾಡಿ ಅಂತ ಹೇಳಿದರು. ಹೀಗಾಗಿ, ಖಾಸಗಿ ಘಟಕಗಳು ಇವತ್ತು ಸಾಕಷ್ಟು ಬಂದು ಆ ಸರ್ಕಾರದ ಮೇಲಿನ ಒತ್ತಡ ಮತ್ತು ವಿದ್ಯುತ್ತಿನ ಬೇಡಿಕೆಯ ಮೇಲಿನ ಒತ್ತಡ ಇವತ್ತು ತಗ್ಗಿದೆ. ಈ ಬುದ್ಧಿವಂತಿಕೆಯನ್ನು ಉಪಯೋಗ ಮಾಡಿಯೆಂದು ನನ್ನ ವಿನಂತಿ ಇದೆ. ಕರ್ನಾಟಕ ರಾಜ್ಯದಲ್ಲಿ ಕೂಡ ತಮ್ಮ ನೇತೃತ್ವದಲ್ಲಿ ಇದನ್ನು ಮಾಡಿದರೆ, ಬಹಳಷ್ಟು ಪ್ರೈವೇಟ್ ಕಂಪನಿಗಳು ಇವತ್ತು ತೆರೆಯಲಿಕ್ಕೆ ತಯಾರಾಗಿವೆ. ಅವರಿಗೆ ಇನ್ಸೆಂಟೀವ್ಸ್ ಕೊಡಬೇಕು. ನಿಮ್ಮ ಇನ್‌ಕಂ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್‌ನಲ್ಲಿ ನಿಮಗೆ ರೀಬೇಟ್ ಕೊಡುತ್ತೇವೆ ಅಂತ ಹೇಳಿದರೆ ಅವರು ಇದನ್ನು ತಯಾರು ಮಾಡಲಿಕ್ಕೆ ಸಾಧ್ಯತೆ ಆಗುತ್ತದೆ. ವಿಶೇಷವಾಗಿ ಗ್ಯಾಸ್‌ನಿಂದ ವಿದ್ಯುತ್ ಉತ್ಪಾದನೆ ಮಾಡುವಂಥ ಘಟಕಗಳು ಇವತ್ತು ಬರುತ್ತಿವೆ. ಇವತ್ತು ಜರ್ಮನಿ ಇರಬಹುದು, ಬೇರೆ ಬೇರೆ ದೇಶಗಳಲ್ಲಿ ಇಂಥ ವಿದ್ಯುತ್ ಘಟಕಗಳನ್ನು ಹೇರಳವಾಗಿ ಮುಕ್ಕಾಲು ಪರ್ಸೆಂಟ್‌ಗಿಂತ ಜಾಸ್ತಿ ಅಲ್ಲಿ ಉತ್ಪಾದನೆ ಮಾಡತಕ್ಕಂಥ ವಿದ್ಯುತ್ ಘಟಕಗಳು ಅಲ್ಲಿ ಬರುತ್ತಿವೆ. ಹಾಗಾಗಿ, ಇಲ್ಲಿ ಕೂಡ ಇದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಒಂದು ಸಾರಿ ನಮ್ಮ ಒಬ್ಬ ವಿಜ್ಞಾನಿ ಹತ್ತಿರ ನಾನು ಮಾತನಾಡುತ್ತಿದ್ದೆ. ಅವರು ಹೇಳುತ್ತಾರೆ, ವಿಶೇಷವಾಗಿ ನಮ್ಮ ಬಂಜರು ಭೂಮಿಗಳು ಸಾಕಷ್ಟು, ಲಕ್ಷಾಂತರ ಹೆಕ್ಟೇರ್ ಕರ್ನಾಟಕದಲ್ಲಿವೆ. ಇವತ್ತು ಬಳ್ಳಾರಿ ಜಾಲಿಯಂಥ ಒಂದು ಸಸ್ಯ ಇದೆ ಅದನ್ನು ಬೆಳೆಸಿ ಅದರ ಮೂಲಕ ಶಾಖೋತ್ಪನ್ನ ವಿದ್ಯುತ್ ಅನ್ನು ತಯಾರು ಮಾಡಲಿಕ್ಕೆ ಬರುತ್ತದೆ. ಸಾಕಷ್ಟು ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ, ವಿದ್ಯುತ್ ಕೂಡ ಜಾಸ್ತಿಯಾಗುತ್ತದೆ. ಮತ್ತೆ ಬಂಜರು ಭೂಮಿಯನ್ನು ನಾವು ಸಾಗುವಳಿ ಮಾಡಲಿಕ್ಕೆ ಆಗುತ್ತದೆ. ಇದು ಏಕೆ ಈ ಬುದ್ಧಿವಂತಿಕೆಯನ್ನು ಉಪಯೋಗಿಸಬಾರದು? ಈ ಬಗ್ಗೆ ಒಂದು ಸರಿಯಾದಂಥ ಚಿಂತನೆಗಳು ನಡೆಯಬೇಕಾಗುತ್ತದೆ. 1980ನೇ ಇಸವಿಯ ನಂತರ, ಬಹಳ ದೊಡ್ಡ ವಿದ್ಯುತ್ ಉತ್ಪಾದನಾ ಘಟಕಗಳು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗಲೇ ಇಲ್ಲ; ಇದೊಂದು ದುರದೃಷ್ಟಕರವಾದಂಥ ಸಂಗತಿ. ಎಲ್ಲೋ 100 ಮೆಗಾವ್ಯಾಟ್, 150 ಮೆಗಾವ್ಯಾಟ್ ಅನ್ನು ತಯಾರು ಮಾಡುವಂಥ ಘಟಕಗಳನ್ನು ಅಲ್ಲೊಂದು ಇಲ್ಲೊಂದು ಸೇರಿಸುತ್ತಾ ಬಂದಿರುವುದೇ ವಿನಃ ಬಹಳ ಅಗಾಧವಾಗಿರತಕ್ಕಂಥ ವಿದ್ಯುತ್ ಉತ್ಪಾದನಾ ಘಟಕವನ್ನು ನಾವು ಇವತ್ತು ನಿರ್ಮಾಣ ಮಾಡಲೇ ಇಲ್ಲ. ಒಂದು ಕಾಲಕ್ಕೆ ಗುಜರಾತ್‌ನಂಥ ಒಂದು ರಾಜ್ಯ ವಿದ್ಯುತ್ತಿನ ಕೊರತೆಯನ್ನು ಬಹಳ ಅಗಾಧವಾಗಿ ಎದುರಿಸುತ್ತಿತ್ತು. ಅದೂ ಕೂಡ ಇವತ್ತು ಔದ್ಯಮಿಕ ರಂಗದಲ್ಲಿ ಬಹಳ ದೊಡ್ಡ ಪ್ರಗತಿಯನ್ನು ಸಾಧಿಸಿದೆ. ಅದು ಇವತ್ತು ಆ ವಿದ್ಯುತ್ತಿನ ಕೊರತೆಯನ್ನು ನೀಗಿಸಲಿಕ್ಕೆ ವಿಶೇಷವಾದಂಥ ಪ್ರಯತ್ನ ಮಾಡಿ ಇವತ್ತು ಎಕ್ಸೆಸ್ ವಿದ್ಯುತ್ ಅಲ್ಲಿ ಕೂಡ ಸಿಗುತ್ತದೆ

ಅನ್ನುವಂಥದ್ದೂ ಕೂಡ ನಮಗೆ ಸ್ಟಾಟಿಸ್ಟಿಕ್ಸ್‌ನಿಂದ ಗೊತ್ತಾಗುತ್ತಿದೆ. ಆದ್ದರಿಂದ, ಇವತ್ತು ಆಲಮಟ್ಟಿ, ಬಳ್ಳಾರಿ, ಇದನ್ನೆಲ್ಲಾ ಸ್ವಲ್ಪ ಸರಿಯಾಗಿ ಸ್ಟ್ರೆಂಗ್ತನ್ ಮಾಡಿದರೆ ಜಾಸ್ತಿ ವಿದ್ಯುತ್ ಅನ್ನು ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ, ನನಗೆ ಅರ್ಥವಾಗದೇ ಇರುವಂಥದ್ದೊಂದು ಸಮಸ್ಯೆ ಅಂದರೆ, ಮಾನ್ಯ ಸಚಿವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಮ್ಮ ಷುಗರ್ ಫ್ಯಾಕ್ಟರಿಯವರಿಗೆಲ್ಲಾ ನೀವು ಕೋ–ಜನರೇಷನ್ ಸ್ಟಾರ್ಟ್ ಮಾಡಿ ಎಂದು ಹೇಳಿದರು. ಅವರಿಂದ ಖರೀದಿಯೇ ಮಾಡುತ್ತಿಲ್ಲ. ಏಕೆ? ಕಳೆದ ಸರ್ಕಾರಕ್ಕೂ ಕೂಡ ನಾನು ಒತ್ತಾಯ ಮಾಡಿದ್ದೆ. ಏಕೆಂದರೆ, ರೇಟ್ ಕಾಂಟ್ರಾಕ್ಟ್ ಆಗಲಿಲ್ಲ. ಏನೇನೋ? ಅವರನ್ನು ಕೂರಿಸಿಕೊಂಡು ಕೇಳಿದರೆ ಹೇಳುತ್ತಾರೆ. ಹಿಂದಿನ ಸರ್ಕಾರದ ಜೊತೆಯಲ್ಲಿ ನಡೆದಂಥ ಒಡಂಬಡಿಕೆ ಇತ್ಯಾದಿ. ಇದನ್ನೆಲ್ಲಾ ಕೇಳಿದರೆ ಬಹಳ ಆಶ್ಚರ್ಯವಾಗುತ್ತದೆ. ನಮಗೆ ಇವತ್ತು ಇವು ಗೌರವ ತರುವಂಥ ಸಂಗತಿಗಳಲ್ಲ. ಇವತ್ತು ನಮ್ಮ ಷುಗರ್ ಫ್ಯಾಕ್ಟರಿಗಳೇನು ಉತ್ಪಾದನೆ ಮಾಡುತ್ತಿವೆ, ಅವುಗಳಿಗೆ ಸ್ವಲ್ಪ ಪ್ರೋತ್ಸಾಹ ಕೊಟ್ಟು ಇವತ್ತು ಸಾಲ ಮಾಡಿ ಆ ಘಟಕಗಳನ್ನು ಪ್ರಾರಂಭ ಮಾಡಿದ್ದಾರೆ. ಅವರ ಕಾರ್ಖಾನೆಗೆ ಹೆಚ್ಚಾಗಿರತಕ್ಕಂಥ ವಿದ್ಯುತ್ ಅನ್ನು ನಾವು ಖರೀದಿ ಮಾಡಬೇಕಾಗುತ್ತದೆ. ಅವರನ್ನು ಕೂರಿಸಿ ಬಂದು ನೆಗೋಷಿಯೇಷನ್ ಮಾಡಿ, ಅವರ ಹತ್ತಿರ ಖರೀದಿ ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆ. ಏಕೆ ಮಾಡಲಿಲ್ಲ ಎನ್ನುವಂಥದ್ದೂ ಕೂಡ ಗೊತ್ತಿಲ್ಲ. ಇದರಲ್ಲಿ ಏಕೆ ರೇಟ್ ಹೊಂದಾಣಿಕೆಯಾಗಲಿಲ್ಲ ಅಂತ ಹೇಳಿ ಗೊತ್ತಿಲ್ಲ. ವಿಶೇಶವಾಗಿ, ವಿದ್ಯುತ್ ಟ್ರಾನ್ಸ್‌ಮಿಷನ್ ನಷ್ಟ ಇದು ಅಗಾಧವಾಗಿದೆ. ಬಹುಶಃ ಟ್ರಾನ್ಸ್‌ಮಿಷನ್ ಲಾಸ್ ಅನ್ನು ತಪ್ಪಿಸಿದರೆ ಶೇಕಡಾ 1ರಷ್ಟು ಕಡಿಮೆಯಾದರೆ 90 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ ಎನ್ನುವಂಥದ್ದು ನಮ್ಮ ಸ್ಟ್ಯಾಟಿಸ್ಟಿಕ್ಸ್‌ನಲ್ಲಿ ತಾವು ಹೇಳಿರತಕ್ಕಂಥದ್ದು ಪತ್ರಿಕೆಯಲ್ಲಿ ನೋಡಿದೆ. ಇವತ್ತು ನಮ್ಮದು ಎಷ್ಟಿದೆ? ಏಕೆಂದರೆ, ನಿಮ್ಮ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ, ಶೇಕಡ 25, 26 ಅಂತ ಹೇಳಿ ಇದೆ. ಇನ್ನೂ ಕೂಡ ಜಾಸ್ತಿ ಇದೆ. ಸುಮಾರು 30ಕ್ಕಿಂತ ಜಾಸ್ತಿಯಾಗುತ್ತದೆ. ರೈತರು ಬಳಸುವಂಥ ಪಂಪ್‌ಸೆಟ್‌ಗೆ ವಿದ್ಯುತ್ ಅನ್ನು ಬಹಳ ದೊಡ್ಡ ನಷ್ಟ ಅಂತ ಹೇಳಿ ಹೇಳುವಂಥವರು ಇವತ್ತು 25 ರಿಂದ 30 ಪರ್ಸೆಂಟ್ ನಿಮ್ಮದು ಟ್ರಾನ್ಸ್‌ಮಿಷನ್ ಲಾಸ್ ಆಗುತ್ತಿದೆ. ಅದನ್ನು ತಪ್ಪಿಸಲಿಕ್ಕೆ ಏನು ಉಪಾಯ ಎನ್ನುವಂಥದ್ದು ಖಂಡಿತವಾಗಿಯೂ ಕೂಡ ಗೊತ್ತಿಲ್ಲ. ನೀವು ಅದರ ಬಗ್ಗೆ ಆಲೋಚನೆ ಮಾಡಲಿಲ್ಲ. ಅದನ್ನು ಸರಿಯಾದಂಥ ನಿಟ್ಟಿನಲ್ಲಿ ಮಾಡುವಂಥ ಪ್ರಯತ್ನಗಳೂ ಕೂಡ ಇತ್ತೀಚಿನವರೆಗೂ ಆಗಲಿಲ್ಲ. ಇತ್ತೀಚೆಗೆ ಕೇಂದ್ರ ಸರ್ಕಾರದ ಎಪಿಡಿಆರ್‌ಪಿ ಮತ್ತು ಬೇರೆ ಬೇರೆ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಮಾಡುತ್ತೇವೆ ಅಂತ ಹೇಳಿ ಇಲ್ಲಿ ಹೇಳುತ್ತಿದ್ದೀರಿ. ಇವತ್ತು ಸಬ್–ಟ್ರಾನ್ಸ್‌ಮಿಷನ್‌ನ ಎಲ್‌ಟಿ ಲೈನ್‌ಗಳಿಂದ ಹೆಚ್‌ಟಿ ಲೈನ್‌ಗೆ ಬದಲಾಯಿಸಿದರೆ ಸುಮಾರು 4 ಪರ್ಸೆಂಟ್ ವಿದ್ಯುತ್‌ನ ನಷ್ಟವನ್ನು ಉಳಿಸಬಹುದೆನ್ನುವಂಥದ್ದನ್ನು ಹೇಳುತ್ತಿದ್ದಾರೆ. ಸಬ್–ಸ್ಟೇಷನ್‌ಗಳಲ್ಲಿ ವಿಶೇಷವಾಗಿ, ಒಂದು ಟ್ರಾನ್ಸ್‌ಮಿಷನ್ ಲಾಸ್. ಇನ್ನೊಂದು ಎಲ್ಲಕ್ಕಿಂತ ಹೆಚ್ಚಾಗಿ ನಾನು ಹೇಳುವಂಥದ್ದು, ಮಾನ್ಯ ಸಚಿವರಿಗೆ ಕೂಡ ಗೊತ್ತಿದೆ. ಎಲ್ಲಿ ಯಾರು ಕಳ್ಳತನ ಮಾಡುತ್ತಾರೋ, ಅವರನ್ನು ಹಿಡಿದು ಮಟ್ಟ ಹಾಕಲಿಕ್ಕೆ ಬೇಕಾದಂಥ ಕಾನೂನನ್ನು ನೀವು ಏನಾದರೂ ತರದಿದ್ದರೆ ಹೆಚ್ಚು ಕಡಿಮೆ ಈ ನಷ್ಟ ಏನಾಗುತ್ತಿದೆ, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಕಳ್ಳತನದಿಂದ ಹೋಗುತ್ತಿದೆ. ಇವತ್ತು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಂದ ಹಿಡಿದು ಬಹಳಷ್ಟು ಜನ ಕಳ್ಳತನ ಮಾಡುತ್ತಿದ್ದಾರೆ. ಕಳ್ಳತನಕ್ಕೆ ಯಾರ ಕುಮ್ಮಕ್ಕು ಎಂದರೆ ನಿಮ್ಮ ಇಲಾಖೆಯವರೇ ಕುಮ್ಮಕ್ಕು. ಇಲ್ಲದಿದ್ದರೆ, ಖಂಡಿತವಾಗಿಯೂ

ಇಲಾಖೆಯವರಿಗೆ ಗೊತ್ತಿಲ್ಲದಿದ್ದರೆ ನಿಮ್ಮಲ್ಲಿ ಯಾರೂ ಕೂಡ ಖಾಸಗಿಯವರು ಯಾರೂ ಕೂಡ ಕಳ್ಳತನ ಮಾಡಲಿಕ್ಕೆ ಸಾಧ್ಯವಿಲ್ಲ. ಇಲಾಖೆಯವರು ಸೇರಿಕೊಂಡು ಮಾಡುತ್ತಿದ್ದಾರೆ. ಅವರಿಗೊಂದು ಅಕೌಂಟಬಿಲಿಟಿ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಹೇಳುವುದಾದರೆ, ಸಬ್–ಸ್ಟೇಷನ್ ಲೆವೆಲ್‌ನಲ್ಲಿ ಮೀಟರ್ ಇಟ್ಟು ಅಲ್ಲಿ ಇವತ್ತು ಕ್ಯಾಲ್ಕ್ಯುಲೇಷನ್ ಆಗಬೇಕಾಗುತ್ತದೆ. ಅದನ್ನು ಮಾಡಿದಾಗ ಮಾತ್ರ ಇವತ್ತು ಎಷ್ಟು ನಷ್ಟವಾಗುತ್ತದೆ? ಎಷ್ಟು ಕಳ್ಳತನವಾಗುತ್ತದೆ. ಎನ್ನುವಂಥದ್ದು ಖಂಡಿತ ಗೊತ್ತಾಗುತ್ತದೆ ಮತ್ತು ಆ ಕಳ್ಳತನವನ್ನು ಹಿಡಿದಂಥ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಇಂಜಿನಿಯರ್, ಅಲ್ಲಿರತಕ್ಕಂಥ ಲೈನ್‌ಮನ್ ಅನ್ನು ಹೊಣೆಗಾರನನ್ನಾಗಿ ಮಾಡಬೇಕು. ಅವರನ್ನು ಡಿಸ್‌ಮಿಸ್ ಮಾಡಬೇಕು ಅಥವಾ ಅವರನ್ನು ಶಿಕ್ಷೆಗೆ ಗುರಿ ಮಾಡಬೇಕು. ನನಗೆ ಗೊತ್ತಿದ್ದ ಹಾಗೆ, ಒಬ್ಬನೇ ಒಬ್ಬ ಇಂಜಿನಿಯರ್ ಇದರಿಂದ ಸಸ್ಪೆಂಡ್ ಆಗಲಿಲ್ಲ. ಒಬ್ಬನೇ ಒಬ್ಬ ಇಂಜಿನಿಯರ್ ಇದರಿಂದ ಡಿಸ್‌ಮಿಸ್ ಕೂಡ ಆಗಲಿಲ್ಲ. ಏಕೆಂದರೆ, ಅವರಿಗೇನಿಲ್ಲ. ಅವರು ತನ್ನಷ್ಟಕ್ಕೆ ತಾನೇ ಯಾರದೋ ದುಡ್ಡು ಎಲ್ಲಮ್ಮನ ಪರಿಷೆ ಅಂತ ಹೇಳಿ ಅವರ ಜೋಬಿಗೆ ಹಾಕಿಕೊಂಡು ಅವರು ಕಳ್ಳನತನ ಮಾಡುವುದಕ್ಕೆ ಬಿಟ್ಟುಕೊಂಡು ಅವರು ಆರಾಮ ಇದ್ದಾರೆ. ಆದ್ದರಿಂದಾಗಿ, ಇದನ್ನು ಸರಿಯಾದಂಥ ನಿಟ್ಟಿನಲ್ಲಿ ಒಂದು ಕಾನೂನನ್ನು ತಂದು ಅದನ್ನು ಸರಿ ಮಾಡುವಂಥದ್ದು ಒಳ್ಳೆಯದು ಅಂತ ಹೇಳಿ ನನಗನ್ನಿಸುತ್ತದೆ. ಹಳೇ ಲೈನ್‌ಗಳನ್ನು ಬದಲಾಯಿಸಿ ಮತ್ತು ವಿಶೇಷವಾಗಿ ಟಿಸಿಗಳು, ಮಾನ್ಯ ಅಧ್ಯಕ್ಷರೆ, ನನಗನ್ನಿಸುತ್ತದೆ, ಇವರು ಹಳೇ ಟಿಸಿ ರಿಪೇರಿ ಮಾಡುವಂಥದ್ದು. ನೀವು ಸ್ಟ್ಯಾಟಿಸ್ಟಿಕ್ಸ್ ತೆಗೆಯಿರಿ. ಹಳೆಯ ಟಿಸಿ ರಿಪೇರಿ ಮಾಡುತ್ತಾರೆ. ನಮ್ಮಲ್ಲೆಲ್ಲಾ ಶಿವಮೊಗ್ಗದಲ್ಲಿ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಹಳೆಯ ಟಿಸಿ ಕಿತ್ತುಕೊಂಡು ಹೋಗಿ ಹೊಸ ಪೇಂಟ್ ಹೊಡೆಯುತ್ತಾರೆ. ಆಯಿಲ್ ಛೇಂಜ್ ಮಾಡುತ್ತಾನೆ. ಯಾವ ಆಯಿಲ್ ಅಂತ ಗೊತ್ತಿಲ್ಲ. ಇನ್ನೊಂದರ ಟಿಸಿ ಆಯಿಲ್ ಛೇಂಜ್ ಮಾಡಿ ಕಳುಹಿಸೋದು. ಸೀಲ್ ಹಾಕಿ ಕಳುಹಿಸುತ್ತಾನೆ. 8 ದಿನ ಅದು ಉಳಿದರೆ ಅದು ನಮ್ಮ ಅದೃಷ್ಟ. ನೀವು ರಿಪೇರಿ ಮಾಡಿರತಕ್ಕಂಥ ಟಿಸಿಯ ಸರಾಸರಿ ಆಯುಷ್ಯವನ್ನು ತೆಗೆದುಕೊಳ್ಳಿ. ಅಂದರೆ, ಇದರಲ್ಲಿ ಯಾರು ಹಣ ಮಾಡುತ್ತಿದ್ದಾರೆ? ಏನಾಗಿದೆ? ಏಕೆ ಇಷ್ಟೊಂದು ಸಾವಿರಾರುಗಟ್ಟಲೆ ಟಿಸಿಗಳು ಸುಡುತ್ತಿವೆ ಎನ್ನುವಂಥದ್ದನ್ನು ಆಲೋಚನೆ ಮಾಡಬೇಕು ಎನ್ನುವಂಥದ್ದು ನನ್ನ ವಿನಂತಿ. ಇವರಿಗೆ 2000–2001ನೇ ಸಾಲಿನಲ್ಲಿ ಕೇಂದ್ರ ಸರ್ಕಾರ 39 ಯೋಜನೆಗಳಿಗೆ 114.5 ಕೋಟಿ ರೂಪಾಯಿಗಳನ್ನು ಕೊಟ್ಟಿತು. 31–3–2004ರವರೆಗೆ 105 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಅಂದರೆ ಸುಮಾರು ಮೂರು ವರ್ಷಗಳಿಂದ 114 ಕೋಟಿ ರೂಪಾಯಿ ಖರ್ಚು ಮಾಡಿ ಸುಧಾರಣೆ ತರಲಿಕ್ಕೆ ಮೂರು ವರ್ಷ ನಾಲ್ಕು ವರ್ಷಗಳಿಂದ ನಿಮ್ಮ ಇಲಾಖೆಗೆ ಸಾಧ್ಯವಾಗಿಲ್ಲ, ಕೇಂದ್ರ ಸರ್ಕಾರ ಹಣ ಕೊಟ್ಟರೂ ಇದನ್ನು ಬಳಕೆ ಮಾಡಿಕೊಂಡಿಲ್ಲವೆಂದರೆ ನನಗೆ ಇದು ಆಶ್ಚರ್ಯವಾಗುತ್ತದೆ. ಏಕೆಂದರೆ, ಆಗತಕ್ಕಂಥ ನಷ್ಟವನ್ನು ಗ್ರಾಹಕರ ತಲೆಯ ಮೇಲೆ ಹಾಕಬಾರದು. ಇವತ್ತು ಏನಾಗಿದೆ, ನಿಮ್ಮ ಎಪಿಡಿಆರ್‌ಪಿನಲ್ಲಿ 2002–03ರಲ್ಲಿ 1197.23 ಕೋಟಿ ರೂಪಾಯಿಗಳ ಯೋಜನೆಗೆ ಅನುಮೋದನೆ ಆಗಿದೆ, ಆದರೆ 31–3–2004ರವರೆಗೆ ಕೇವಲ 290 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿರುವುದು. ಉಳಿದಿದ್ದನ್ನು ಖರ್ಚು ಮಾಡಲಿಕ್ಕೆ ಏನು ತೊಂದರೆಯಾಗಿದೆ? ನಾನು ಏನು ಹೇಳುವುದು ಎಂದರೆ, ನಿಮ್ಮ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸತಕ್ಕಂಥ ಕೆಲಸ ಮಾಡಬೇಕಾಗಿದೆ. ಮೊನ್ನೆ ತಾನೇ ತಾವು 900 ಕೋಟಿ ರೂಪಾಯಿಗಳಿಗೆ ಒಂದು ಸಹಿ ಮಾಡಿದಿರಿ, ಅದು ಇನ್ನು 20 ವರ್ಷವಾದರೂ ನೀವು ಖರ್ಚು

ಮಾಡುವುದಿಲ್ಲ, ಇವರು ಖರ್ಚು ಮಾಡುವುದಿಲ್ಲ, ಇವರಿಗೆ ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ಟೆಂಡರ್ ಕರೆಯುವುದಕ್ಕೆ ಒಂದು ವರ್ಷ, ಅದನ್ನು ಸ್ಕ್ರುಟಿನಿ ಮಾಡುವುದಕ್ಕೆ ಮತ್ತೊಂದು ವರ್ಷ, ನಂತರ ವರ್ಕ್ ಆರ್ಡರ್ ಕೊಡುವುದಕ್ಕೆ ಒಂದು ವರ್ಷ, ಆರ್‌ಇಸಿ ನಲ್ಲಿ ತಾವು ನೋಡಿ ಏನಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಹಾಗಾದರೆ ಈ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಎಷ್ಟು ಸಂಬಳ? ಮೊದಲು ಒಂದು ಕಂಪನಿ ಕೆಇಬಿ ಎಂದಿತ್ತು, ನಂತರ ಅದನ್ನು ಕೆಪಿಟಿಸಿಎಲ್ ಎಂದು ಮಾಡಿದಿರಿ, ನಂತರ ಅದು ಹೋದ ಮೇಲೆ ನಾಲ್ಕು ಕಂಪನಿ ಮಾಡಿ ಮತ್ತೊಂದು ತಮ್ಮ ಭಾಗದಲ್ಲಿ ಒಂದು ಕಂಪನಿ ಒಟ್ಟು ಐದು ಕಂಪನಿ ಮಾಡಿದಿರಿ. ಈಗ ಏನಾಗಿದೆ ಕೇವಲ ಬೋರ್ಡ್ ಬದಲಾವಣೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದವನು ಸೂಪರಿಂಟೆಂಡಿಂಗ್ ಇಂಜಿನಿಯರ್ ಆದ, ಸೂಪರಿಂಟೆಂಡಿಂಗ್ ಇಂಜಿನಿಯರ್ ಇದ್ದವನು ಚೀಫ್ ಇಂಜಿನಿಯರ್ ಆದ, ಒಂದಷ್ಟು ಜನ ಚೀಫ್ ಇಂಜಿನಿಯರ್ಸ್ ಜಾಸ್ತಿಯಾದರು, ಒಂದಷ್ಟು ಜನ ಸೂಪರಿಂಟೆಂಡಿಂಗ್ ಇಂಜಿನಿಯರ್ಸ್ ಜಾಸ್ತಿಯಾದರು, ಒಂದಷ್ಟು ಜನ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಜಾಸ್ತಿ ಆದರು, ಒಂದಷ್ಟು ಜನ ಎಂ.ಡಿ ಗಳು ಆದರು, ಅವರಿಗೆ ಕಾರು, ಬಂಗಲೆ, ಟಿಎ, ಡಿಎ, ಇದೆಷ್ಟು ಆಯಿತು? ನಿಮ್ಮ ಲೈನ್‌ಮ್ಯಾನ್‌ಗಳ ಹುದ್ದೆ ಎಷ್ಟು ಸಾವಿರ ಖಾಲಿ ಇವೆ ಎಂಬುದರ ಬಗ್ಗೆ ನಿನ್ನೆ ನೀವೇ ಉತ್ತರ ಕೊಟ್ಟಿರಿ. ಹಾಗಾದರೆ ಕಂಬ ಹತ್ತುವುದು ಯಾರು? ಇರುವಂಥ ಲೈನ್‌ಮ್ಯಾನ್‌ಗಳಿಗೆ ಸೊಂಟವೂ ಇಲ್ಲ, ಕಂಬ ಹತ್ತಲು ಕೈ ಕಾಲು ಗಟ್ಟಿ ಇಲ್ಲ. ಅವರು ಕಂಬ ಹತ್ತಲಾರರು. ನಾನು ನಮ್ಮ ಊರಿನಲ್ಲಿ ಯಾರೋ ಎಲೆಕ್ಟ್ರಿಕ್ ಕೆಲಸ ಕಲಿತವನತ್ತಿರ ಹತ್ತಿಪ್ಪತ್ತು ರೂಪಾಯಿ ಕೊಟ್ಟು ಕಂಬ ಹತ್ತಿಸಿ ಇವತ್ತು ಬೀದಿ ದೀಪಗಳನ್ನು ಹಾಕಿಸಬೇಕಾಗಿದೆ. ಒಬ್ಬರೇ ಒಬ್ಬ ಲೈನ್‌ಮ್ಯಾನ್‌ಗಳಿಗೆ ಕಂಬ ಹತ್ತುವ ಶಕ್ತಿ ಇಲ್ಲ. ನೀವು ರಿಕ್ರೂಟ್‌ಮೆಂಟ್ ಮಾಡಿಕೊಳ್ಳುವುದಿಲ್ಲ. ಹೋಗಲಿ ಕಂಟ್ರಾಕ್ಟ್ ಆದರೂ ಕೊಡುತ್ತೀರೋ ಅದನ್ನು ಕೊಡುವುದಿಲ್ಲ. ಏಕೆ ಎಂ.ಡಿ ಗಳನ್ನು ಜಾಸ್ತಿ ಮಾಡುತ್ತೀರಿ? ಏಕೆ ಈ ಚೀಫ್ ಇಂಜಿನಿಯರ್ಸ್ ಅನ್ನು ಜಾಸ್ತಿ ಮಾಡುತ್ತೀರಿ? ಅವರಿಂದ ಏನಾಗುತ್ತದೆ ಎಂದರೆ, ಏನಿಲ್ಲ ಕೇವಲ ಒಂದು ಚೋಟಾ ಸಿಗ್ನೇಚರ್ ಹಾಕಿ, ಇವನಿಂದ ಅವನಿಗೆ ಅವನಿಂದ ಇವನಿಗೆ ಕಳುಹಿಸುವ ವ್ಯವಸ್ಥೆಯಾಗುತ್ತದೆ, ಆಫೀಸ್ ಸೂಪರಿಂಟೆಂಡ್ ಹತ್ತಿರ ಕಂಬ ಕಳುಹಿಸಿ ಎಂದು ಹೇಳಿದರೆ, ಕಾರ್ಪೊರೇಟ್ ಆಫೀಸ್‌ನಿಂದ ಇನ್ನು ಅನುಮೋದನೆ ಬಂದಿಲ್ಲ ಸಾರ್, ಎಂದು ಹೇಳುತ್ತಾರೆ, ಈಗ ಹೊಸ ಶಬ್ದ ಇವರದು ಏನು ಅಂದರೆ, ಕಾರ್ಪೊರೇಟ್ ಆಫೀಸ್ ಎಂದೆನ್ನುತ್ತಾರೆ. ಒಂದೊಂದು ಕಂಪನಿಗಳನ್ನು ಬೇರೆ ಮಾಡಿ ಐದು ಕಂಪನಿಗಳಾಗಿ ಮಾಡಿದಿರಿ. ಕಾರ್ಪೊರೇಟ್ ಆಫೀಸ್ ಮಾಡಿದಿರಿ, ಎಸಿ ಛೇಂಬರ್‌ಗಳನ್ನು ಮಾಡಿದಿರಿ, ಯಾರ ತಲೆಯ ಮೇಲೆ ಈ ಹಣ? ಬಡ ಬಳಕೆದಾರರ ತಲೆಯ ಮೇಲೆ ಈ ಹಣ ಹಾಕಿದಿರಿ. ಕೇವಲ ಮೂರು ವರ್ಷದಲ್ಲಿ 41 ಪರ್ಸೆಂಟ್ ವಿದ್ಯುತ್ತಿನ ದರವನ್ನು ಜಾಸ್ತಿ ಮಾಡಿದಿರಿ. ಈಗ ಮತ್ತೆ 21 ಪರ್ಸೆಂಟ್ ಜಾಸ್ತಿ ಮಾಡಲಿಕ್ಕೆ ನೀವು ಕೆಇಆರ್‌ಸಿ ಮುಂದೆ ಹೋಗಿದ್ದೀರಿ. ಕೆಇಆರ್‌ಸಿಗೆ ನಿಮ್ಮ ಇಲಾಖೆ ಬೇಡಿಕೆಯನ್ನು ಸಲ್ಲಿಸಿದೆ. ನಾಡಿದ್ದು ಅದರ ಅಂತಿಮ ತೀರ್ಪು ಇದೆ, ಅವರು ಅಬ್ಜೆಕ್ಷನ್ ಕಾಲ್‌ಫಾರ್ ಮಾಡಿದ್ದಾರೆ. ಹಾಗಾದರೆ ನೀವು ಇನ್ನು ಎಷ್ಟು ಹೆಚ್ಚಿಗೆ ಮಾಡುತ್ತೀರಿ? ಇವತ್ತು ಇದರ ಪರಿಣಾಮ ಏನಾಗಿದೆ, ನಮ್ಮ ಇಂಡಸ್ಟ್ರಿನವರು ಇವತ್ತು ಡೀಸೆಲ್ ಜನರೇಟರ್‌ಗಳನ್ನು ಹಾಕುತ್ತಿದ್ದಾರೆ. ಸಾಮಾನ್ಯ ಜನ ಇವತ್ತು ಇದರ ಈ ಕರೆಂಟಿನ ಹಾಳು ಸಹವಾಸ ಬೇಡ ಎನ್ನುತ್ತಿದ್ದಾರೆ. ಇವತ್ತು ಕರೆಂಟ್ ಏಕೆ ಹಾಕಿಸಿಕೊಳ್ಳುವುದು ಎಂದರೆ, ನಮ್ಮ ಊರಿನಲ್ಲಿ ನಮ್ಮ ಮನೆಗೆ ಕರೆಂಟ್

ಕನೆಕ್ಷನ್ ಇಲ್ಲ ಟೆಲಿಫೋನ್ ಕನೆಕ್ಷನ್ ಇಲ್ಲವೆಂದರೆ ಆ ಮನೆಗೆ ಯಾರೂ ಹೆಣ್ಣು ಕೊಡುವುದಿಲ್ಲ ನೆಂಟಸ್ತಿಕೆ ಮಾಡಿಕೊಳ್ಳಲಿಕ್ಕೆ ಯಾರೂ ಬರುವುದಿಲ್ಲ, ಏಕೆಂದರೆ, ಇವರು ಬಹಳ ಹಿಂದುಳಿದವರು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಾಗಿರಬಹುದು, ನಮ್ಮ ಮನೆಗೆ ಕರೆಂಟ್ ಕನೆಕ್ಷನ್ ಇಲ್ಲ, ಟೆಲಿಫೋನ್ ಕನೆಕ್ಷನ್ ಇಲ್ಲವೆಂದರೆ, ಇವನು ಬಹಳ ಬ್ಯಾಕ್‌ವರ್ಡ್ ಇದ್ದಾನೆ, ಇವನು ಏತಕ್ಕೂ ಬೇಡದಿದ್ದವನು ಎಂದು ನಮ್ಮ ಮನೆಗೆ ಹೆಣ್ಣು ಕೊಡುವುದಿಲ್ಲ, ನಮ್ಮ ಮನೆಯಲ್ಲಿರುವ ಹೆಣ್ಣನ್ನು ತೆಗೆದುಕೊಂಡು ಹೋಗುವುದಿಲ್ಲ, ನಮಗೆ ನೆಂಟಸ್ತಿಕೆ ಆಗುವುದಿಲ್ಲ. ಈ ದೊಡ್ಡಸ್ತಿಕೆಗಾಗಿ ನಾವು ಈ ಕರೆಂಟ್ ಕನೆಕ್ಷನ್ ತೆಗೆದುಕೊಳ್ಳಬೇಕೆ ವಿನಾ ಅದರಲ್ಲಿ ಕರೆಂಟ್ ಬರುತ್ತದೆಂದು ನಾವು ಅಂದುಕೊಳ್ಳುವ ಹಾಗೆ ಇಲ್ಲ. ನಮ್ಮ ಮಕ್ಕಳು ಇವತ್ತು ಕರೆಂಟಿನ ಸ್ವಿಚ್ ಹಾಕಿಕೊಂಡು ಚಿಮಣಿಬುಡ್ಡಿ ಹಚ್ಚಿಕೊಂಡು ಓದಬೇಕು, ಏಕೆಂದರೆ, ಕ್ವಾಲಿಟಿ ಕರೆಂಟ್ ಇಲ್ಲ, ಸಿಂಗಲ್‌ಫೇಸ್ ಕರೆಂಟ್ ಇರುತ್ತದೆ. ಏಕೆಂದರೆ, ನಿಮ್ಮ 25 ಕೆವಿ ಟಿಸಿಗೆ 100 ಕೆವಿಯಷ್ಟು ಲೋಡ್ ಹಾಕುತ್ತೀರಿ, ಇದರಿಂದಾಗಿ ಅದು ದಿನಾ ಸುಟ್ಟು ಹೋಗುತ್ತಿದೆ ಇಲ್ಲವೆಂದರೆ ಅದರಲ್ಲಿ ಕರೆಂಟ್ ಬರುವುದಿಲ್ಲ. ಅದರಿಂದಾಗಿ ಬೆಳಕು ಬರುವುದಿಲ್ಲ. ಈ ದೊಡ್ಡಸ್ತಿಕೆಗೋಸ್ಕರ ನಾವು ಕೆರಂಟ್ ಹಾಕಿಸಿಕೊಳ್ಳಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಾವಿಂದು ಇದ್ದೇವೆ. ಇದು ಖಂಡಿತವಾಗಿ ಸರ್ಕಾರಕ್ಕೆ ಗೌರವ ತರುವ ಸಂಗತಿ ಅಲ್ಲವೆಂದು ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು, 2002–03ರಲ್ಲಿ ಬಂದಂಥ 1197 ಕೋಟಿ ರೂಪಾಯಿಗಳಲ್ಲಿ ಇದಕ್ಕೆ ಅನುಮೋದನೆಯಾದರೆ ನೀವು 2004–05 ರವರೆಗೆ ಅಂದರೆ ಇದುವರೆವಿಗೂ 290 ಕೋಟಿ ರೂಪಾಯಿಗಳನ್ನು ಮಾತ್ರ ವಿದ್ಯುತ್ತಿನ ಸುಧಾರಣೆಗೆ ಖರ್ಚು ಮಾಡಿದಿರಿ. ಯಾವ ಕಾರಣಕ್ಕಾಗಿ ಅಷ್ಟು ಹಣ ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ತಾವು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಮಾನ್ಯ ಇಂಧನ ಸಚಿವರಲ್ಲಿ ನಾನು ಒಂದೇ ಒಂದು ಪ್ರಶ್ನೆ ಕೇಳುವುದು ಏನೆಂದರೆ, ವಿದ್ಯುತ್ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅತ್ಯವಶ್ಯಕ, ಹೇಗೆ ನೀರಾವರಿ ಯೋಜನೆಗೆ ರಸ್ತೆಗೆ ಹಣವನ್ನು ಇನ್‌ವೆಸ್ಟ್ ಮಾಡಿದರೆ ಹೇಗೆ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಹಾಗೆಯೇ ಇಂಧನಕ್ಕೆ ವಿದ್ಯುತ್ ಇಲಾಖೆಗೆ ಹೆಚ್ಚಿನ ಮಹತ್ವ ಕೊಟ್ಟರೆ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಿದರೆ ರಾಜ್ಯದ ಅಭಿವೃದ್ಧಿಯೂ ಆ ವೇಗದಲ್ಲಿ ಆಗುತ್ತದೆ. ನಾನು ಒಂದು ಸ್ಟ್ಯಾಟಿಸ್ಟಿಕ್ ಕೇಳುತ್ತೇನೆ, ನಾನು ಈ ಹಿಂದೆ ಮಾತನಾಡುವಾಗಲೂ ಹೇಳಿದ್ದೆ, ಏನೆಂದರೆ 10 ವರ್ಷಗಳ ಹಿಂದೆ ಗುಜರಾತ್ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಸುಮಾರು ಎರಡೂವರೆ ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತಿದ್ದವು. ಕರ್ನಾಟಕವೂ ಅಷ್ಟೇ ಇತ್ತು, ಗುಜರಾತ್ ಅಷ್ಟೆ ಇತ್ತು. ಆದರೆ ಈಗ ಕರ್ನಾಟಕ 10 ವರ್ಷಗಳ ನಂತರದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸುಮಾರು 4800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದೆ, ಆದರೆ ಗುಜರಾತ್ ಹದಿನಾಲ್ಕೂವರೆ ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದೆ. ಅಂದರೆ ನಮ್ಮ ರಾಜ್ಯ ಸರ್ಕಾರ ಹೇಗೆ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್‌ನ್ನು ಡೆವಲಪ್ ಮಾಡುವುದಕ್ಕೆ ಅತ್ಯಂತ ಉದಾಸೀನ ಮಾಡಿದೆ, ನಿರ್ಲಕ್ಷ್ಯ ಮಾಡಿದೆ ಎನ್ನುವುದಕ್ಕೆ ಇದು ಒಂದು ತಾಜಾ ಉದಾಹರಣೆ. ಎರಡೂವರೆ ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡುತ್ತಿದ್ದ ನಾವು ಈಗ ನಾಲ್ಕುಮುಕ್ಕಾಲು ಸಾವಿರ ಮೆಗಾವ್ಯಾಟ್ ಉತ್ಪಾದನೆ ಹೋಗಿದ್ದೇವೆ. ಗುಜರಾತ್‌ದವರು ಕೂಡ ಮೊದಲು ಎರಡೂವರೆ ಸಾವಿರ ಮೆಗಾವ್ಯಾಟ್ ಉತ್ಪಾದನೆ

ಮಾಡುತ್ತಿದ್ದವರು ಈಗ ಹದಿನಾಲ್ಕೂವರೆ ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡುತ್ತಿದ್ದಾರೆ. ಹೀಗಾಗಿ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ಸ್ ಬಗ್ಗೆ ವಿದ್ಯುತ್ ಇಲಾಖೆ ವಿಶೇಷವಾದಂಥ ಕಾರ್ಯ ಯೋಜನೆಯನ್ನು ಮಾಡಿ ಅನುಷ್ಠಾನಗೊಳಿಸುವುದಕ್ಕೆ ಮುಂದಾಗದೇ ಹೋದರೆ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ. ರಾಜ್ಯದ ಅಭಿವೃದ್ಧಿ ಕುಂಠಿತವಾಗುವುದರ ಜೊತೆಗೆ ಈಗಾಗಲೇ ನಾವು ಹಿಂದುಳಿದ ರಾಜ್ಯಗಳ ಪಟ್ಟಿಗೆ ಸೇರುತ್ತಿದ್ದೇವೆ, ಬಿಹಾರದ ಹತ್ತಿರ ಹತ್ತಿರ ನಾವು ಹೋಗಿತ್ತಿದ್ದೇವೆ. ಭ್ರಷ್ಟಾಚಾರದಲ್ಲಿ ನಾಲ್ಕನೇ ಸ್ಥಾನದಲ್ಲಿ ಇದೆಯಲ್ಲಾ ಹಾಗೆಯೇ, ಅಭಿವೃದ್ಧಿಯ ವೇಗದಲ್ಲಿಯೂ ನಾವು ಕುಂಠಿತವಾಗುತ್ತಿದ್ದೇವೆ. ಮತ್ತಷ್ಟು ಹಿಂದೆ ಹೋಗುವಂಥ ಸಾಧ್ಯತೆ ಇರುತ್ತದೆ, ಮಾನ್ಯ ಅರಗ ಜ್ಞಾನೇಂದ್ರರವರು ಈಗಾಗಲೇ ಹೇಳಿದಂತೆ, ಕೇಂದ್ರ ಸರ್ಕಾರ ಅನೇಕ ಯೋಜನೆಗಳ ಅಡಿಯಲ್ಲಿ ರಾಜ್ಯಕ್ಕೆ ಹಣವನ್ನು ಕೊಡುತ್ತಿದೆ, ಆದರೆ ರಾಜ್ಯವು ತನ್ನ ಹೆಚ್ಚಿನ ಆಸಕ್ತಿಯನ್ನು ಇದರಲ್ಲಿ ತೋರಿಸಿ ಹೆಚ್ಚಿನ ಹಣವನ್ನು ತೊಡಗಿಸಿ ಆ ಯೋಜನೆಗಳ ಲಾಭವನ್ನು ತೆಗೆದುಕೊಂಡು ಈ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ಸ್‌ಗೆ ಹೆಚ್ಚಿನ ಮಹತ್ವ ಕೊಡುವುದಕ್ಕೆ ಮುಂದಾಗುವಂಥ ಅಗತ್ಯತೆ ಇದೆ. ಇದನ್ನೂ ಸಹ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗ ಜ್ಞಾನೇಂದ್ರರವರು ವಿದ್ಯುತ್ ಇಲಾಖೆಯ ಬಗ್ಗೆ ಹಲವಾರು ಬೆಳಕನ್ನು ಚೆಲ್ಲುತ್ತಿದ್ದಾರೆ ಹಾಗೆಯೇ ಮಾನ್ಯ ವಿಶ್ವೇಶ್ವರ ಹೆಗಡೆಯವರೂ ಕೂಡ ಹೇಳಿದರು. ಒಂದು ದಿವಸ ಇಂಧನ ಇಲಾಖೆಯ ಬಗ್ಗೆಯೇ ಡಿಟೇಲ್ ಆಗಿ ಚರ್ಚೆ ಮಾಡಲಿಕ್ಕಾಗಿ ಮಾನ್ಯ ಸಭಾಧ್ಯಕ್ಷರಲ್ಲಿ ನಾನು ಮನವಿ ಮಾಡುವುದು ಏನೆಂದರೆ, ಇದರ ಜೊತೆಗೆ ಸದನಕ್ಕೂ ಕೂಡ ನಾನು ಮನವಿ ಮಾಡಿಕೊಳ್ಳುತ್ತೇನೆ. ಒಂದು ದಿವಸ ಇಂಧನ ಇಲಾಖೆಯ ಬಗ್ಗೆಯೇ ಡಿಟೇಲ್ ಆಗಿ ಚರ್ಚೆ ಮಾಡಿ, ಮುಂದಿನ ದಿನಗಳಲ್ಲಿ ನಾವು ಯಾವ ರೀತಿ ಇಂಧನ ಇಲಾಖೆಯನ್ನು ಹತ್ತಾರು ವರ್ಷಕ್ಕೆ ಅನುಕೂಲವಾಗುವಂತೆ ಒಂದು ವ್ಯವಸ್ಥೆ ಮಾಡುವುದಕ್ಕೆ ಸದನ ಸಂಪೂರ್ಣವಾದ ಸಲಹೆ ಕೊಡಬೇಕೆಂದು ನಾನು ಈ ಸದನಕ್ಕೆ ಹಾಗೂ ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬೇಡಿಕೆಗಳ ಮೇಲೆ ನಾನು ಉತ್ತರ ಕೊಡುತ್ತೇನೆ. ತಾವೇನು ಹೇಳಿದಿರಿ ಅದಕ್ಕೆಲ್ಲಾ ನಾನು ಉತ್ತರ ಕೊಡುವುದಕ್ಕೆ ತಯಾರಿದ್ದೇನೆ, ಆ ಸಂದರ್ಭದಲ್ಲಿ ಉತ್ತರಿಸುತ್ತೇನೆ. ಅದರ ಜೊತೆಗೆ ಇಂಧನ ಇಲಾಖೆಗೆ ಒಂದು ದಿವಸ ಸಪರೇಟಾಗಿ 30ನೇ ತಾರೀಖು ಆದಮೇಲೆ ಯಾವತ್ತಾದರೂ ಒಂದು ದಿವಸ ಚರ್ಚೆ ಮಾಡಿ ಮುಂದಿನ ಹತ್ತು ವರ್ಷಕ್ಕೆ ಏನು ಮಾಡಬೇಕು ಎಂಬುದಕ್ಕೆ ಕಾರ್ಯಕ್ರಮ ರೂಪಿಸುವುದಕ್ಕೆ ತಾವು ಎಲ್ಲಾ ಸಲಹೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಖಂಡಿತವಾಗಿ ಮಾನ್ಯ ಸಚಿವರು ಹೇಳಿದ್ದನ್ನು ತಾವು ಮಾನ್ಯ ಮಾಡಬೇಕು. ತಾವು ಅನುಮತಿ ಕೊಟ್ಟರೆ ಮಾನ್ಯ ಎಲ್ಲಾ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ಇನ್ನಷ್ಟು ಸಲಹೆಗಳನ್ನು ಕೊಟ್ಟರೆ ಅವರಿಗೂ ಅನುಕೂಲವಾಗುತ್ತದೆ, ಸಹಾಯವಾಗುತ್ತದೆ. ಆದುದರಿಂದ, ನಾವು ಇವತ್ತು ಪಕ್ಷ ಪಂಗಡಗಳನ್ನು ಮೀರಿ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತು ಕರೆಂಟ್ ಇಲ್ಲದಿದ್ದರೆ ಊಟ ಇಲ್ಲ, ಸ್ನಾನ ಇಲ್ಲ, ಇಸ್ತ್ರಿ ಬಟ್ಟೆ ಇಲ್ಲ, ಕರೆಂಟ್ ಇಲ್ಲದಿದ್ದರೆ ಏನೇನೂ ಇಲ್ಲ. ನಮ್ಮ ಬದುಕೆ ಇವತ್ತು ಇಂಧನದ ಮೇಲೆ ಅವಲಂಬಿತರಾಗಿರುವುದರಿಂದ, ಇದು ನಮ್ಮ ಬದುಕಿನ ಅವಿಭಾಜ್ಯ ಅಂಗ. ಇದನ್ನು ಸರಿಯಾದ

ರೀತಿಯಲ್ಲಿ ಚರ್ಚೆ ಮಾಡಿ ಒಂದು ಒಳ್ಳೆಯ ಸಲಹೆ ತೆಗೆದುಕೊಂಡು ಶಾಶ್ವತವಾದ ಪರಿಹಾರ ಕಂಡು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಇಲ್ಲಿ ಇವತ್ತು ಅವರು ಬಂದ ಮೇಲೆ ಆದಂಥ ಸಮಸ್ಯೆಗಳಲ್ಲ, ಬಹಳ ಹಿಂದಿನಿಂದಲೂ ಎಳೆದುಕೊಂಡು ಬಂದಿರತಕ್ಕಂಥ ಸಮಸ್ಯೆಗಳಿವೆ. ಅದರಿಂದಾಗಿ ಇದನ್ನು ಅಲ್ಲಲ್ಲಿ ಚೆಕ್ ಮಾಡಿ ಸರಿ ಪಡಿಸದೇ ಇದ್ದರೆ ಇದನ್ನು ಸುಧಾರಿಸದೆ ಇದ್ದರೆ ಪ್ರಾಮಾಣಿಕವಾದ ಪ್ರಯತ್ನಗಳು ಆಗಾಗ ನಡೆಯದೆ ಹೋದರೆ, ಯಾವತ್ತೋ ಒಂದು ದಿನ ಇಡೀ ರಾಜ್ಯ ಅಂಧಕಾರದಲ್ಲಿರಬೇಕಾಗುತ್ತದೆ. ನಿಮ್ಮ ವಿದ್ಯುತ್ ಕಂಪನಿಗಳಾದ ಎಸ್ಕಾಂಗಳಲ್ಲಿ ಆಗಿರುವಂಥ ನಷ್ಟದ ಬಗ್ಗೆ ಹೇಳುವುದಾದರೆ, ಗುಲ್ಬರ್ಗ ವಿದ್ಯುತ್ ಕಂಪನಿಯಲ್ಲಿ ಶೇಕಡ 36.75 ರಷ್ಟು ನಷ್ಟವಾಗಿದೆ. ಮತ್ತೆ ಹುಬ್ಬಳ್ಳಿ ವಿದ್ಯುತ್ ಕಂಪನಿಯಲ್ಲಿ ಶೇಕಡ 26.37 ರಷ್ಟು ನಷ್ಟವಾಗಿದೆ. ಹಾಗೆಯೇ, ಬೆಸ್ಕಾಂನಲ್ಲಿ ಶೇಕಡ 21.4 ಮತ್ತು ಮೆಸ್ಕಾಂನಲ್ಲಿ ಶೇಕಡ 20.24 ರಷ್ಟು ನಷ್ಟವಾಗಿದೆ. ಇವರ ಟ್ರಾನ್ಸ್‌ಮಿಷನ್ ಲಾಸ್‌ನ್ನು ಬೆಂಗಳೂರಿನಲ್ಲಿ ಶೇಕಡ 1.8 ರಷ್ಟು ಇಳಿಸಿದಾಗ 100 ಕೋಟಿ ರೂಪಾಯಿಗಳಷ್ಟು ಲಾಭವಾಗಿದೆ ಎಂದು ನಿಮ್ಮ ವರದಿ ಹೇಳುತ್ತದೆ. ಅಂದರೆ, ಇವತ್ತಿನದಿವಸ ಶೇಕಡ 36 ರಷ್ಟು ಇರತಕ್ಕಂಥ ಟ್ರಾನ್ಸ್‌ಮಿಷನ್ ಲಾಸ್‌ನ್ನು ಕಡಿಮೆ ಮಾಡಿದರೆ ಎಷ್ಟು ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ? ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಈ ಎಲ್ಲಾ ನಷ್ಟವನ್ನು ಬಳಕೆದಾರನ ಜೇಬಿನ, ತಲೆಯ ಮೇಲೆ ಹೊರಿಸುತ್ತಿದ್ದೀರಿ. ಆದ್ದರಿಂದ, ಈ ನಷ್ಟವನ್ನು ಕಡಿಮೆ ಮಾಡುವುದರ ಬಗ್ಗೆ ನಿಮ್ಮ ಪ್ರಯತ್ನಗಳು ಏನು ಎಂಬುದರ ಬಗ್ಗೆ ತಾವು ಹೇಳಬೇಕಾಗುತ್ತದೆ. ಮತ್ತೆ ನಿಮ್ಮಲ್ಲಿ ಲೈನ್‌ಮ್ಯಾನ್‌ಗಳ ಹುದ್ದೆ 7131 ಖಾಲಿ ಇವೆ ಎಂದು ತಾವೇ ಹೇಳಿದ್ದೀರಿ.7131 ಲೈನ್ ಮ್ಯಾನ್‌ಗಳು ಇವತ್ತಿನದಿವಸ ಫೀಲ್ಡ್ ಲೆವೆಲ್‌ನಲ್ಲಿ ಕೆಲಸ ಮಾಡತಕ್ಕಂಥವರನ್ನು ತಾವು ಕಡಿಮೆ ಇಟ್ಟುಕೊಂಡಿದ್ದೀರಿ. ಆದರೆ, ಇವತ್ತಿನದಿವಸ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳನ್ನು ಮತ್ತು ಚೀಫ್ ಇಂಜಿನಿಯರ್‌ಗಳನ್ನು ಜಾಸ್ತಿ ಮಾಡಿ ದೊಡ್ಡ ಹೊರೆಯನ್ನು ಮಾಡಿದ್ದೀರಿ. ಇವತ್ತಿನದಿವಸ ಒಬ್ಬ ಚೀಫ್ ಇಂಜಿನಿಯರಿಗೆ ಕೊಡತಕ್ಕಂಥ ಸಂಬಳದಲ್ಲಿ ಐದು ಜನ ಲೈನ್‌ಮ್ಯಾನ್‌ಗಳಿಗೆ ಸಂಬಳ ಕೊಡಬಹುದು. ಆದ್ದರಿಂದ ಫೀಲ್ಡ್ ಲೆವೆಲ್‌ನಲ್ಲಿ ಕೆಲಸ ಮಾಡತಕ್ಕಂತ ಲೈನ್‌ಮ್ಯಾನ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಳ್ಳಿ ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಹಾಗೆಯೇ ಮಾನ್ಯ ಇಂಧನ ಸಚಿವರು ವಿಶೇಷವಾಗಿ ಸಿ.ಎ.ಜಿ. ವರದಿಯನ್ನು ಗಮನಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಇದರ ಬಗ್ಗೆ ತಾವು ಸ್ವಲ್ಪ ಕಣ್ಣಾಡಿಸಿದರೆ ಏನು ಎನ್ನತಕ್ಕಂಥದ್ದು ತಮಗೆ ಗೊತ್ತಾಗುತ್ತದೆ. ಇದರಲ್ಲಿ ನನಗೆ ಗೊತ್ತಿದ್ದ ಹಾಗೆ ಹೇಳುವುದಾದರೆ, ಕಲ್ಲಿದ್ದಲು ಪರ್ಚೇಸ್‌ನಲ್ಲಿ ಅಂದರೆ, ಕಲ್ಲಿದ್ದಲನ್ನು ಗಣಿಯಲ್ಲಿ ಮಾಡಿದಂಥ ತೂಕಕ್ಕೂ ಮತ್ತು ರಾಯಚೂರಿಗೆ ಬಂದ ನಂತರ ಮಾಡಿದಂಥ ತೂಕಕ್ಕೂ ವ್ಯತ್ಯಾಸವಾಗಿ 151.83 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಸಿ.ಎ.ಜಿ. ವರದಿಯಲ್ಲಿ ತಿಳಿಸಲಾಗಿದೆ. ಗಣಿಯಲ್ಲಿ ತೂಕ ಮಾಡಿ ಲೋಡ್ ಮಾಡಿದ ನಂತರ ಇಲ್ಲಿ ಬಂದು ಮತ್ತೆ ತೂಕ ಮಾಡಿದಾಗ ಟ್ರಾನ್ಸ್‌ಪೋರ್ಟ್‌ನಿಂದ ಆಗಿರತಕ್ಕಂಥ ಶಾರ್ಟೇಜ್‌ನಿಂದ 151.83 ಕೋಟಿ ರೂಪಾಯಿಗಳಷ್ಟು ನಷ್ಟ ಕೇವಲ ಮೂರು ವರ್ಷಗಳಲ್ಲಿ ಆಗಿದೆ ಎಂದು ಸಿ.ಎ.ಜಿ. ವರದಿಯಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ತಾವು ಹೇಳಬೇಕು. ಹಾಗೆಯೇ, ಇದರ ಬಗ್ಗೆ ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಮತ್ತೆ ಯಾವ ಕಾರಣಕ್ಕಾಗಿ ನಿಮ್ಮ ಕೆ.ಪಿ.ಸಿ. ಕೇವಲ ನಾಲ್ಕೈದು ಕಂಪನಿಗಳಿಂದ ಮಾತ್ರ ಕಲ್ಲಿದ್ದಲು ಪರ್ಚೇಸ್

ಮಾಡುತ್ತಿದೆ? ಇದರಲ್ಲಿ ಒಂದು ಕಂಪನಿಯಿಂದ ಮಾತ್ರ ಬರತಕ್ಕಂಥ ಕಲ್ಲಿದ್ದಲು ರಾಯಚೂರಿನಲ್ಲಿ ತೂಕ ಮತ್ತು ಗುಣಮಟ್ಟವನ್ನು ಚೆಕ್ ಮಾಡಲಾಗುತ್ತದೆ ಮತ್ತೆ ಉಳಿದಿರತಕ್ಕಂಥದಲ್ಲಾ ಗಣಿ ಲೆವೆಲ್‌ನಲ್ಲಿಯೇ ತೂಕ ಮಾಡಬೇಕೆಂದು ಒಪ್ಪಂದ ಮಾಡಿಕೊಂಡಿದ್ದೀರಿ. ಆದ್ದರಿಂದ ಇದರ ಕಾರಸ್ಥಾನವೇನು? ಈ 151 ಕೋಟಿ ರೂಪಾಯಿ ಕೃಷ್ಣಾರ್ಪಣವೆ? ಯಾರ್ಯಾರು ಸೇರಿಕೊಂಡು ಈ ಒಪ್ಪಂದವನ್ನು ಮಾಡಿಕೊಂಡಿದ್ದೀರಿ? ಮತ್ತೆ ಈ 151 ಕೋಟಿ ರೂಪಾಯಿಗಳಲ್ಲಿ ಯಾರ್ಯಾರ ಪಾಲು ಎಷ್ಟಿದೆ ಎಂಬುದನ್ನು ತಾವು ಹೇಳಬೇಕು. ಇದರಿಂದ 151 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಸಿ.ಎ.ಜಿ.ರವರು ಗುರುತು ಮಾಡಿ ವರದಿಯಲ್ಲಿ ಹೇಳಿರುವುದಕ್ಕೆ ಇವರು ಏನು ಉತ್ತರ ಕೊಟ್ಟಿದ್ದಾರೆಂದರೆ, ನ್ಯೂನತೆ ಅರಿವಾಗಿದೆ, ಕಂಪನಿ ಜೊತೆ ಚರ್ಚಿಸುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನನ್ನ ವಿನಂತಿ ಏನೆಂದರೆ, ಈ ಚರ್ಚೆಯು ಮುಗಿಯುವ ತನಕ ನಮ್ಮ ದೊಡ್ಡದೊಡ್ಡ ಅಧಿಕಾರಿಗಳ ಸಂಬಳವನ್ನು ನಿಲ್ಲಿಸಿ. ಮೊದಲು ಚರ್ಚೆ ಮಾಡಿ ಬನ್ನಿ ಅನಂತರ ಸಂಬಳ ಕೊಡುತ್ತೇನೆಂದು ತಾವು ಹೇಳಿ. ಈ ರೀತಿಯಾದರೆ ಮರ್ಯಾದೆ ಬರುತ್ತದೆಯೆ ಎಂದು ತಾವು ಕೇಳಿ. ಎಷ್ಟು ದಿವಸ ಇದರ ಚರ್ಚೆ ಮಾಡಬೇಕು ಮತ್ತು ಯಾವ ಕಾರಣಕ್ಕಾಗಿ ಚರ್ಚೆ ಮಾಡಬೇಕು? ಒಂದೆರಡು ರೂಪಾಯಿಗಳಲ್ಲ, 151 ಕೋಟಿ ರೂಪಾಯಿಗಳನ್ನು ಕೇವಲ ಕಲ್ಲಿದ್ದಲ ಟ್ರಾನ್ಸ್‌ಪೋರ್ಟ್‌ನಿಂದ ನಷ್ಟ ಮಾಡಿ, ಇದರ ಬಗ್ಗೆ ಇನ್ನು ಚರ್ಚೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ, ಈ ರೀತಿಯಾಗಿ ಒಡಂಬಡಿಕೆ ಮಾಡಿಕೊಂಡಿರತಕ್ಕಂಥ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಕೇಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಉತ್ತರದಲ್ಲಿ ಹೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಿ.ಎ.ಜಿ. ರಿಪೋರ್ಟ್‌ನ 38ನೇ ಪುಟವನ್ನು ತಾವು ತೆಗೆದು ನೋಡಬೇಕು. ನಮ್ಮ ರಾಯಚೂರು ವಿದ್ಯುತ್ ಉತ್ಪಾದನಾ ಘಟಕದಲ್ಲಿ ಒಂದು ಯುನಿಟ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗಿ ಬೇಕಾಗಿರತಕ್ಕಂಥ ತಾಪಮಾನ 2395 ಕಿಲೋ ಕ್ಯಾಲರಿ. ಆದರೆ, ಇದಕ್ಕಿಂಥ ಅಧಿಕ ಪ್ರಮಾಣದಲ್ಲಿ ಅಂದರೆ 2500 ಕಿಲೋ ಕ್ಯಾಲರಿ ತಾಪಮಾನವನ್ನು ಘಟಕಗಳು ಉಪಯೋಗಿಸಿರುವುದರಿಂದ 2001 ರಿಂದ 2003ನೇ ಇಸವಿಯವರೆಗೆ ಆಗಿರತಕ್ಕಂಥ ನಷ್ಟ 204.98 ಕೋಟಿ ರೂಪಾಯಿ ಆಗಿರುತ್ತದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಂದರೆ, ಶಾಖವನ್ನು ಹೆಚ್ಚು ಕಡಿಮೆ ಮಾಡಿದ್ದರಿಂದ ಆಗಿರತಕ್ಕಂಥ ನಷ್ಟ 204.98 ಕೋಟಿ ರೂಪಾಯಿ, ಹೆಚ್ಚು ಕಡಿಮೆ 205 ಕೋಟಿ ರೂಪಾಯಿ ಆಗುತ್ತದೆ. ಇನ್ನು ಕಳಪೆ ಗುಣಮಟ್ಟದ ಕಲ್ಲಿದ್ದಲನ್ನು ಖರೀದಿ ಮಾಡಿದ್ದರಿಂದ, 2001ರಿಂದ 2003–2004ರವರೆಗೆ 757.118 ಮಿಲಿಯನ್ ಯುನಿಟ್ ವಿದ್ಯುತ್ ನಷ್ಟವಾಗಿದೆ. ಇವತ್ತಿನದಿವಸ ಒಂದು ಯುನಿಟ್‌ಗೆ ಎರಡು ರೂಪಾಯಿ ಇಟ್ಟುಕೊಂಡರೆ ಸುಮಾರು 151 ಕೋಟಿ ರೂಪಾಯಿ ಇದರಿಂದ ನಷ್ಟವಾಗಿದೆ. ಕೇವಲ ಮೂರು ವರ್ಷಗಳಲ್ಲಿ ರಾಯಚೂರು ವಿದ್ಯುತ್ ಘಟಕ ಒಂದರಲ್ಲಿಯೇ ಸುಮಾರು 500 ರಿಂದ 600 ಕೋಟಿ ರೂಪಾಯಿಗಳಷ್ಟು ನಷ್ಟ ಮಾಡಿರತಕ್ಕಂಥ ಅಧಿಕಾರಿಗಳು ಯಾರು? ಇದಕ್ಕೆ ಇಂಧನ ಇಲಾಖೆಯ ಕಾರ್ಯದರ್ಶಿಯವರು ಮತ್ತು ಕೆ.ಪಿ.ಸಿ. ಎಂ.ಡಿ.ಯವರು ಹಾಗೆಯೇ ಬೇರೆ ಬೇರೆ ಅಧಿಕಾರಿಗಳು ಇದ್ದಾರೆ. ಹಾಗೆಯೇ ಇದಕ್ಕೆ ಒಬ್ಬರು ಛೇರ್ಮನ್ ಕೂಡ ಇದ್ದಾರೆ. ಇವರೆಲ್ಲರೂ ಸೇರಿದರೂ ಕೂಡ ಇದರ ಬಗ್ಗೆ ಸೀರಿಯಸ್ ಆಗಿ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಮತ್ತೆ ಇದರ ಬಗ್ಗೆ ಸಿಎಜಿ ರಿಪೋರ್ಟ್ ಕೊಟ್ಟ ನಂತರವೂ ಕೂಡ ಗಮನಹರಿಸದೆ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆಂದು ಉತ್ತರ ಕೊಡುತ್ತಾರೆಂದರೆ ನಾವು ಏನನ್ನು

ಹೇಳಬೇಕೋ ಎನ್ನತಕ್ಕಂಥದ್ದು ಗೊತ್ತಿಲ್ಲ. ಇದು ಈ ರಾಜ್ಯದ ಜನತೆಗೆ ಬಿಟ್ಟಿದ್ದು. ಏಕೆಂದರೆ, ಇಷ್ಟು ಹಣದ ಕೊರತೆ, ಇಷ್ಟು ನಷ್ಟವನ್ನು ನಮ್ಮ ಪ್ರಾಮಾಣಿಕ ಬಳಕೆದಾರರ ಮೇಲೆ ಹಾಕುತ್ತಿರುವುದರಿಂದ ಸರ್ಕಾರಕ್ಕೆ ಗೌರವ ಬರುತ್ತದೆಯೇ ಎಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ಮತ್ತೆ ವಿಶ್ವೇಶ್ವರಯ್ಯ ನಿಗಮದ ಡೀಸೆಲ್ ವಿದ್ಯುತ್ ಉತ್ಪಾದನಾ ಘಟಕದ ಬಗ್ಗೆ ಹೇಳುವುದಾದರೆ, ನಿಗದಿತ ಪ್ರಮಾಣಕ್ಕಿಂತ ಅಧಿಕ ಅಂದರೆ 1662.15 ಮೆಟ್ರಿಕ್ ಟನ್ ಇಂಜಿನ್ ಆಯಿಲ್ ಉಪಯೋಗವಾಗಿದೆ. ಇದರಿಂದ 8.36 ಕೋಟಿ ರೂಪಾಯಿಗಳು ನಷ್ಟವಾಗಿದೆ. ಇಂಜಿನ್ ಆಯಿಲ್ ಒಂದರಿಂದ ಇಷ್ಟು ನಷ್ಟವಾಗಿದೆ. ಈ ವಿದ್ಯುತ್ ಘಟಕದಲ್ಲಿ 2003–2004ನೇ ಸಾಲಿನಲ್ಲಿ ನಿಗದಿ ಪಡಿಸಿರತಕ್ಕಂಥ ವಿದ್ಯುತ್ ಉತ್ಪಾದನೆಯಲ್ಲಿ ಶೇಕಡ 42 ರಷ್ಟು ಮಾತ್ರ ವಿದ್ಯುತ್ ಉತ್ಪಾದನೆಯಾಗಿದೆ. ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಯಾವ ಕಾರಣಕ್ಕಾಗಿ ಸಾಧ್ಯವಾಗಲಿಲ್ಲ ಎಂಬುದಕ್ಕೆ ಏನು ಉತ್ತರ ಕೊಡುತ್ತಾರೆಂದರೆ, ಇಂಜಿನ್ ಸರಬರಾಜು ಮಾಡಿರತಕ್ಕಂಥ ಕಂಪನಿಯವರ ಜೊತೆ ಚರ್ಚಿಸುತ್ತೇವೆಂದು ಉತ್ತರ ಕೊಡುತ್ತಾರೆ. ಈ ಇಂಜಿನ್ ಸರಬರಾಜು ಮಾಡಿರತಕ್ಕಂಥ ಕಂಪನಿಯ ಜೊತೆ ಯಾವಾಗ ಚರ್ಚೆ ಮಾಡುತ್ತೀರಿ? ಈ ಇಂಜಿನ್‌ಗೆ ಎಷ್ಟು ವರ್ಷ ಗ್ಯಾರಂಟಿ ಇದೆ? ಇದರ ಬಗ್ಗೆ ಯಾವಾಗ ಕಂಪ್ಲೇಂಟ್ ಮಾಡಿದ್ದೀರಿ? ಮತ್ತೆ ಇಷ್ಟು ನಷ್ಟವಾಗುವುದಕ್ಕೆ ಹೊಣೆಗಾರರು ಯಾರು? ಈ ರೀತಿಯಾಗಿ ನಷ್ಟವಾಗುತ್ತಿದೆ ಎಂದು ತಿಳಿದ ಕೂಡಲೇ ಸಂಬಂಧಪಟ್ಟಂಥ ಕಂಪನಿಯವರ ಜೊತೆ ಚರ್ಚೆ ಮಾಡಿ ಇದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಯಾವ ಕಾರಣಕ್ಕಾಗಿ ಮಾಡಿಲ್ಲ? ಸಿ.ಎ.ಜಿ.ರವರು ಪರಿಶೀಲನೆ ಮಾಡುವಾಗ ರ‍್ಯಾಂಡಂ ಆಗಿ ಅಲ್ಲೊಂದು ಇಲ್ಲೊಂದು ಪರಿಶೀಲನೆ ಮಾಡುತ್ತಾರೆ. ಇವತ್ತಿನದಿವಸ ಸಂಪೂರ್ಣವಾಗಿ ಟೆಸ್ಟ್ ಮಾಡಿದಾಗ ಸಾವಿರಾರು ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ಎಂಬುದನ್ನು ಯೋಚನೆ ಮಾಡಿದಾಗ ನಮಗೆ ನಿಜವಾಗಿಯೂ ಕೂಡ ಭಯವಾಗುತ್ತದೆ. ಕಳೆದ ಸಲ ಶೇಕಡ 41 ರಷ್ಟು ವಿದ್ಯುತ್ ದರವನ್ನು ಏರಿಸಿದ್ದೀರಿ. ಮತ್ತೆ ಈಗ ಶೇಕಡ 21 ರಷ್ಟು ವಿದ್ಯುತ್ ದರ ಏರಿಸಲು ನೀವು ಕೆಇಆರ್‌ಸಿಗೆ ವಿನಂತಿ ಮಾಡಿಕೊಂಡಿದ್ದೀರಿ. ಈ ಇಲಾಖೆಯ ಒಂದು ಅದಕ್ಷತೆಯ ಹೊಣೆಗಾರಿಕೆಯನ್ನು ನಮ್ಮ ಗ್ರಾಹಕರು ನಿಭಾಯಿಸುವಂತೆ ಆಗಬಾರದು. ಈ ರಾಜ್ಯದ ಬಳಕೆದಾರರ ಮೇಲೆ ಇಷ್ಟೊಂದು ದೊಡ್ಡ ಹೊರೆಯನ್ನು ಹೊರಿಸಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಬ್ಬ ಗ್ರಾಹಕ ವರ್ಗಕ್ಕೂ ಕೂಡ ವಿದ್ಯುತ್ ಸರಬರಾಜಿಗೆ ಆಗತಕ್ಕಂಥ ವೆಚ್ಚವನ್ನು ವಿತರಣ ಕಂಪನಿಗಳು ವೈಜ್ಞಾನಿಕವಾಗಿ ನಿರ್ಧರಿಸಬೇಕು. ಇವತ್ತಿನದಿವಸ ನಮ್ಮಲ್ಲಿ 14 ಲಕ್ಷ ಕೃಷಿ ಪಂಪ್‌ಸೆಟ್‌ಗಳಿವೆ ಎಂದು ನಮ್ಮ ಹತ್ತಿರ ಅಂಕಿ–ಅಂಶ ಇದೆ. ಇವೆಲ್ಲವನ್ನೂ ಕೂಡ ಒಂದು ಸಲ ನೀವು ನೋಡಬೇಕು. ಮಲೆನಾಡು ಪ್ರದೇಶದಲ್ಲಿರತಕ್ಕಂಥ ನಾವೆಲ್ಲಾ ಏನು ಮಾಡಿದ್ದೇವೆಂದರೆ, ನಮಗೆ ನೀವು ಮೀಟರ್ ಹಾಕಿಕೊಡಿ ಎಂದು ಹೇಳಿ ನಾವೆಲ್ಲಾ ಮೀಟರನ್ನು ಹಾಕಿಸಿಕೊಂಡಿದ್ದೇವೆ. ಇದಕ್ಕೆ ನಾವು ವಿರೋಧ ಮಾಡಲಿಲ್ಲ ಮತ್ತು ನಿಮ್ಮ ಮೀಟರ್‌ಗಳನ್ನು ತಂದು ಸುಡಲಿಲ್ಲ. ನಾವು ಮೀಟರ್‌ಗಳನ್ನು ಹಾಕಿಸಿಕೊಳ್ಳುತ್ತಿದ್ದೇವೆ. ಇದರ ಸಂಪೂರ್ಣ ಹೊರೆಯನ್ನು ನಾವು ನಿಭಾಯಿಸಬೇಕಾಗಿದೆ. ಇವತ್ತಿನದಿವಸ ಮೀಟರ್ ಹಾಕಿಕೊಂಡು ಕಾನೂನು ಪ್ರಕಾರ ಇರುವಂಥ ನಮಗೆ ನೀವು ಹೊರೆ ಹಾಕಬಾರದು. ನಮಗೆ ಇನ್ಸೆಂಟೀವ್ಸ್ ಕೊಡಬೇಕಾಗುತ್ತದೆ. ಇವತ್ತಿನದಿವಸ ಮಲೆನಾಡಿನಲ್ಲಿ ಯಾರು ಮೀಟರ್ ಅಳವಡಿಸಿಕೊಂಡಿದ್ದಾರೆ, ಅವರಿಗೆ ಈ ವೆಚ್ಚದಲ್ಲಿ ಕಡಿಮೆ ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಈ ಎಲ್ಲಾ ನಷ್ಟವನ್ನು ನಮ್ಮ ಮೇಲೆ

ಹಾಕಬಾರದೆಂದು ಈ ಸಂದರ್ಭದಲ್ಲಿ ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನದಿವಸ ಬೆಸ್ಕಾಂ ಹೊರತುಪಡಿಸಿ ಉಳಿದಂಥ ಎಲ್ಲಾ ಎಸ್ಕಾಂಗಳು ನಷ್ಟದಲ್ಲಿವೆ. ವಿಶೇಷವಾಗಿ ಗ್ರಾಹಕರಿಂದ ಠೇವಣಿಯನ್ನು ಸಂಗ್ರಹ ಮಾಡಿದ್ದೀರಿ. ಇವತ್ತಿನದಿವಸ ನಾನು ಒಂದು ಪಂಪ್‌ಸೆಟ್ ಹಾಕಬೇಕಾದರೆ ನನ್ನಿಂದ ಡಿಪಾಜಿಟ್ ಇಡಿಸಿಕೊಳ್ಳುತ್ತೀರಿ. ಆದರೆ, ಕೆಪಿಟಿಸಿಎಲ್ ನಿಂದ ಎಸ್ಕಾಂಗಳಿಗೆ ವಿತರಣೆ ಮಾಡುವಾಗ 476 ಕೋಟಿ ರೂಪಾಯಿಗಳಷ್ಟು ಠೇವಣಿ ಹಣ ಕಾಣೆಯಾಗಿದೆ. ಇದನ್ನು ಸ್ವಲ್ಪ ತಾವು ನೋಡಬೇಕು. 476 ಕೋಟಿ ರೂಪಾಯಿಗಳಷ್ಟು ನಮ್ಮ ಡಿಪಾಜಿಟ್ ಹಣವೇ ಇಲ್ಲವಂತೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಲೆಕ್ಕಗಳು ಸಹ ಇಲ್ಲವಂತೆ. ಇದು ಕಾಣೆಯಾಗಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇದನ್ನು ಸ್ವಲ್ಪ ಹುಡುಕಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮತ್ತೆ ನಿಮ್ಮ ವಿದ್ಯುತ್ ಕಂಪನಿಗಳಿಗೆ ಆಗುವಂಥ ವೆಚ್ಚ 2004ರಲ್ಲಿ 1220.70 ಕೋಟಿ ರೂಪಾಯಿಗಳು, 2005ರಲ್ಲಿ 1342.07 ಕೋಟಿ ರೂಪಾಯಿಗಳು, 2006 ಕ್ಕೆ 1636 ಕೋಟಿ ರೂಪಾಯಿಗಳಾಗುತ್ತದೆಂದು ಹೇಳಿ ಒಂದು ಅಂದಾಜು ಮಾಡಿದ್ದಾರೆ. ಅಂದರೆ ನಿಮ್ಮ ಎಸ್ಕಾಂಗಳ ಒಟ್ಟಾರೆ ವೆಚ್ಚ ವರ್ಷೇ ವರ್ಷೇ ಜಾಸ್ತಿಯಾಗುತ್ತಿದೆ. ಇದನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಇವತ್ತು ದಿನಕ್ಕೆ 12 ಗಂಟೆಯಾದರೂ ಕನಿಷ್ಠ ತಡೆ ರಹಿತವಾಗಿರತಕ್ಕಂಥ ವಿದ್ಯುತ್‌ನ್ನು ಕೊಟ್ಟರೆ ನಿಮ್ಮ ಕಾಲದಲ್ಲಿ ತುಂಬಾ ಉಪಕಾರ ಎಂದು ಹೇಳಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ವಿದ್ಯುತ್ ಅವಘಡಗಳು, ಸರ್ ಬೇಗ ಮುಗಿಸುತ್ತೇನೆ, ಈ ಬಗ್ಗೆ ಯಾರು ಎಲಿಕ್ಟ್ರಿಸಿಟಿ ಬಗ್ಗೆ ಯಾರೂ ಮಾತನಾಡಿರಲಿಲ್ಲವೆಂದು ನಾನು ಮಾತನಾಡಿದೆ, ನಾನು ಮಾತನಾಡುವುದು ತುಂಬಾ ಇದ್ದರೂ ಕೂಡ ನೀವು ಹೇಳುತ್ತಿರುವುದರಿಂದ ಬೇಗ ಮುಗಿಸುತ್ತೇನೆ. 2001ರಲ್ಲಿ 637 ಜನ ಬಲಿಯಾಗಿದ್ದಾರೆ ಪ್ರಾಣಿಗಳು 461. 2001–02ರಲ್ಲಿ 555 ಜನ ಮನುಷ್ಯರು, 309 ಪ್ರಾಣಿಗಳು. 2002–03ರಲ್ಲಿ ಪ್ರಾಣಿಗಳು 469. 2003–04ರಲ್ಲಿ 489 ಜನ ಮನುಷ್ಯರು, 2004–05ರಲ್ಲಿ 617 ಜನ ಒಟ್ಟು 5 ವರ್ಷಗಳಲ್ಲಿ 2763 ಜನರನ್ನು ನಿಮ್ಮ ಇಲಾಖೆ ಬಲಿ ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ನನಗೆ ಅತ್ಯಂತ ದುಃಖವಾಗುತ್ತದೆ. ಇದು ಏಕೆ ಹೀಗೆ ಆಗಿದೆ ಎಂದು ಹೇಳಿದರೆ, ನಿಮ್ಮ ಇಲಾಖೆಯವರು ಕೆಲವು ಕಡೆ ಏನನ್ನೂ ನೋಡುವುದಿಲ್ಲ. ಹೇಳಿದರೂ ಕೂಡ ಅವರು ನೋಡುವುದಿಲ್ಲ. ನಮ್ಮ ಊರಿನಲ್ಲಿ ಕೈ ಎತ್ತಿದರೆ ನಿಮ್ಮ ಹೆಚ್‌ಟಿ ಲೈನ್ ಸಿಗುತ್ತದೆ. ಏನಾದರೂ ಮಧ್ಯದಲ್ಲಿ ಕಂಬ ಹಾಕಿ ಟೈಟ್ ಮಾಡಿ ಎಂದು ಹೇಳಿದರೆ ಏನು ಮಾಡೋಣ ಸರ್ ಕಾರ್ಪೊರೇಟ್ ಆಫೀಸಿನಿಂದ ಅನುಮತಿ ಬರಬೇಕು ಬರೆದಿದ್ದೇವೆಂದು ಅವರು ಹೇಳುತ್ತಾರೆ. ಇದನ್ನು ಹೇಳುವುದಕ್ಕೆ ಅಲ್ಲಿ ಒಂದು ಆಫೀಸಿನ ಅಗತ್ಯತೆ ಇದೆಯೆ? ನೀವು ಹೇಳಿದಿರಿ ಇತ್ತೀಚೆಗೆ ಬೆಂಗಳೂರಿನಲ್ಲಿ ಸತ್ತಾಗ, ಯಾರಿಗೋ ಶಿಕ್ಷೆ ಕೊಡುತ್ತೇವೆ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ನೀವು ಯಾರಿಗೂ ಕೂಡ ಶಿಕ್ಷೆ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಯಾರೂ ಕೂಡ ಅಲ್ಲಿ ಹೊಣೆಗಾರರು ಅಲ್ಲ. ಯಾರಿಗೂ ಶಿಕ್ಷೆ ಕೊಡುವುದಿಲ್ಲ. ಮತ್ತೆ ವಿಶೇಷವಾಗಿ ಸತ್ತಾಗ ಅವರಿಗೆ ಪರಿಹಾರ ಕೊಡಬೇಕು, ಕೆಎಸ್‌ಆರ್‌ಟಿಸಿ ನಲ್ಲಿ ಸತ್ತಾಗ ತಕ್ಷಣ ಅವರು ಪರಿಹಾರ ಕೊಡುತ್ತಾರೆ. ನಿಮ್ಮಲ್ಲಿ ಅಂತಹ ಒಂದು ಯೋಜನೆ ಇಲ್ಲ, ದಯವಿಟ್ಟು ಅಂಥದ್ದು ಒಂದು ಮಾಡಿ, ಏಕೆಂದರೆ ಸಾಯುವುದನ್ನು ಇವರಿಗೆ ಎಲ್ಲಿಯವರೆಗೆ ನಿಲ್ಲಿಸುವುದಕ್ಕೆ ಆಗುವುದಿಲ್ಲವೋ ಕನಿಷ್ಠ ಪರಿಹಾರ ಕೊಡುವುದಕ್ಕಾದರೂ ಒಂದು ವ್ಯವಸ್ಥಿತವಾದ ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ಒಂದನ್ನು ನಿಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಅಧ್ಯಕ್ಷರೆ, ರಾಜೀವಗಾಂಧಿ ಕುಟೀರ ಯೋಜನೆ 2002–03, 2003–04 2004–05 ಕ್ಕೆ ಯಾರ್‍ಯಾರು ಫಲಾನುಭವಿಗಳಿಗೆ ಮಂಜೂರು ಮಾಡಿದ್ದರು ಅದಕ್ಕೆಲ್ಲಾ ವರ್ಕ್ ಪ್ರೋಗ್ರೆಸ್‌ನಲ್ಲಿತ್ತು, ಈಗ ಅದೆಲ್ಲವನ್ನೂ ನಿಲ್ಲಿಸಿ ಎಂದು ಹೆಸ್ಕಾಂ ನಿಮ್ಮ ಹುಬ್ಬಳ್ಳಿ ಕಂಪನಿಯವರು ಆದೇಶವನ್ನು ಮಾಡಿದ್ದಾರೆ. ರಾಜ್ಯದ ಉಳಿದ ಕಡೆಗೂ ಮಾಡಿರಬಹುದು. ಆದರೆ ಹೆಸ್ಕಾಂದವರು 2003–04, 2004–05ನೇ ಸಾಲಿನ ರಾಜೀವಗಾಂಧಿ ಕುಟೀರ ಯೋಜನೆಗೆ ಬಡವರು ಅವರಿಗೆ ಲೈನ್ ಹಾಕುವುದಕ್ಕೆ ಮೀಟರ್ ಹಾಕುವುದಕ್ಕೆ ಎಲೆಕ್ಟ್ರಿಫಿಕೇಷನ್ ಮಾಡಿಸುವುದಕ್ಕೆ ಸ್ವಲ್ಪ ಹಣವನ್ನು ಕೊಡುತ್ತಿದ್ದರು. ನಾನು ನಿಯಮ 351 ರಲ್ಲಿ ಕೇಳಿದರೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಒಂದು ಉತ್ತರವನ್ನು ಕೊಟ್ಟಿದ್ದಾರೆ. ನಾವು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು, ಮಾನ್ಯ ಸಚಿವರಲ್ಲಿ ನನ್ನ ಒಂದು ವಿನಂತಿ ಏನೆಂದರೆ, ಹಿಂದೆ ಮಂಜೂರಾತಿಯಾದವರಿಗೆ, ಅವರಿಗೆ ಅದೇ ಯೋಜನೆಯಲ್ಲಿ ಆ ಬಡವರು ಕುಟೀರಜ್ಯೋತಿ ತೆಗೆದುಕೊಳ್ಳುವಂಥವರು ಅವರಿಗೆ ಅದನ್ನು ಮಾಡಿಸಿಕೊಳ್ಳುವುದಕ್ಕೆ ಹೆಸ್ಕಾಂದವರಿಗೆ ಡೈರೆಕ್ಷನ್ ಕೊಡಿ. ಈ ವರ್ಷದ ಬಗ್ಗೆ ನಾನು ಮಾತನಾಡುವುದಿಲ್ಲ. ಹಿಂದೆ 2003–04, 2004–05ಕ್ಕೆ ಮಂಜೂರಾಗಿ ಅರ್ಧಂಬರ್ಧ ಕೆಲಸವನ್ನು ಮಾಡಿಕೊಂಡಿದ್ದಾರೆ ಈಗ ದುಡ್ಡು ಕಟ್ಟಿದರೆ ಮಾತ್ರ ನಾವು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆ ಬಡವರು ಈಗ ಮಳೆಗಾಲ 1000, 2000, 5000 ರೂಪಾಯಿಗಳನ್ನು ಎಲ್ಲಿಂದ ತರುವುದು? ನಿಮ್ಮ ಕಂಪನಿಗಳವರಿಗೆ ನಿಜವಾಗಲೂ ಅವರಿಗೆ ಮನುಷ್ಯತ್ವ ಇಲ್ಲ, ಬರೀ ಕಾನೂನು, ಅನೇಕ ಇಲಾಖೆಗಳಿಗೆ ಆ ಮಾನವೀಯತೆಯ ಸ್ಪಂದನವೇ ಇಲ್ಲದಂತೆ ಅವರು ಒಂದು ತರಹ ಮೆಷಿನ್‌ದಂತೆ ನಡೆದುಕೊಳ್ಳುವುದನ್ನು ಕಾಣುತ್ತಿದ್ದೇವೆ. ಹಾಗಾಗಿ ನೀವು ರಾಜೀವಗಾಂಧಿ ಕುಟೀರ್ ಯೋಜನೆಯಲ್ಲಿ ಮಂಜೂರಾದ ಫಲಾನುಭವಿಗಳಿಗೆ ಹಿಂದಿನ ಎರಡು ವರ್ಷದವರಿಗೆ ಯಾವುದೇ ಹಣ ಕಟ್ಟಿಸಿಕೊಳ್ಳದೆ ಮಂಜೂರಾದ ಮಾಡಿದ್ದು ನಮ್ಮ ಸರ್ಕಾರ ನಾವು ತುಂಬಿಕೊಡುತ್ತೇವೆಂದು ಅವರ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿರುವಂಥದ್ದು. ಈಗ ಹಣ ತುಂಬಿ ಎಂದು ಹೇಳಿದರೆ ಬಡವರ ಪರಿಸ್ಥಿತಿ ಏನಾಗಬೇಕು? ಹಾಗಾಗಿ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಹೆಸ್ಕಾಂದವರಿಗೆ ಇವತ್ತೇ ಡೈರೆಕ್ಷನ್ ಕೊಟ್ಟು ಆ ಹಿಂದೆ ಮಂಜೂರಾದವರಿಗೆ ಹಣ ತುಂಬಿ ಕೆಲಸವನ್ನು ಮಾಡಿಸಿಕೊಡುವುದು, ಎಲೆಕ್ಟ್ರಿಫಿಕೇಷನ್ ಮಾಡಿಸಿಕೊಳ್ಳುವುದಕ್ಕೆ ಮೀಟರ್, ವೈರಿಂಗ್ ಹಾಕಿಸಿಕೊಳ್ಳುವುದಕ್ಕೆ ಸೂಕ್ತ ನಿರ್ದೇಶನ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್(ಉತ್ತರಹಳ್ಳಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳೆ, ಬೆಂಗಳೂರಿನಲ್ಲಿ ಅಷ್ಟೆ, ನಾವು ಬಡವರ ಪರವಾಗಿ ಬಹಳಷ್ಟು ರ್‍ಯಾಲಿ ಮಾಡಿದ್ದೇವೆ, ನೀವು ಮಾಡಿದ್ದೀರಿ. ಆದರೆ ಲಗ್ಗೆರೆಯಲ್ಲಿ ಸ್ಲಮ್ ಬೋರ್ಡಿನಿಂದ 1000 ಮನೆಗಳನ್ನು ಕಟ್ಟಿದ್ದಾರೆ. ಅವರಿಗೆ ಈಗ ಒಂದೊಂದು ಮನೆಗೆ 65 ಸಾವಿರ ರೂಪಾಯಿಗಳ ಕರೆಂಟ್ ಬಿಲ್ ಕಳುಹಿಸಿದ್ದಾರೆ. ನಾವು ಅವರ ಹತ್ತಿರ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮನೆಯನ್ನು ಕೊಟ್ಟಿರುತ್ತೇವೆ, ಒಂದೊಂದು ಮನೆಗೆ 40 ರಿಂದ 65 ಸಾವಿರ ರೂಪಾಯಿಗಳ ಬಿಲ್ ಒಟ್ಟು ಎರಡೂವರೆ ಕೋಟಿ ರೂಪಾಯಿಗಳ ಬಿಲ್ ಕಳುಹಿಸಿದ್ದಾರೆ. ಅವರಿಗೆ ಈಗ ಕರೆಂಟ್ ಡಿಸ್‌ಕನೆಕ್ಟ್ ಮಾಡಿದ್ದಾರೆ. ಅಲ್ಲಾ ಇದು ಮಾನವೀಯತೆಯೇ? ಮೊದಲೇ ಏಕೆ ಹಣವನ್ನು ಕಲೆಕ್ಟ್ ಮಾಡಿಲ್ಲ. ನಾನು ಅಧಿಕಾರಿಗಳನ್ನು ಕೇಳುವುದು ಸ್ಟಾರ್ಟಿಂಗ್‌ನಿಂದ ಕಲೆಕ್ಟ್ ಮಾಡದೇ ಈಗ ಏಕಾಏಕಿ 5 ವರ್ಷಕ್ಕೆ ನೀವು ಒಂದೊಂದು ಮನೆಗೆ 65 ಸಾವಿರ ರೂಪಾಯಿಗಳ ಬಿಲ್ ಎಂದರೆ ಅದನ್ನು ಕಟ್ಟುವುದಕ್ಕೆ ಸಾಧ್ಯವೆ? ನಡೆಯುತ್ತದೆಯೇ ಇದು? ದಯವಿಟ್ಟು ಅದರ ಬಗ್ಗೆ ಗಮನಹರಿಸಿ ಅದನ್ನು ಮನ್ನಾ ಮಾಡಬೇಕು, ಹೊಸದಾಗಿ ಕಟ್ಟುವುದಕ್ಕಾದರೂ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಮತ್ತು ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಅಶೋಕ್‌ರವರು ಏನು ಹೇಳಿದರು, ಆ ಮಾಹಿತಿಯನ್ನು ನನಗೆ ಕೊಟ್ಟರೆ ನಾನು ಸಂಬಂಧಪಟ್ಟಂಥ ವ್ಯವಸ್ಥಾಪಕ ನಿರ್ದೇಶಕರನ್ನು ಕರೆಯಿಸಿ ನೀವು ನಾವು ಒಟ್ಟಿಗೆ ಕುಳಿತು ನಮ್ಮ ಇಲಾಖೆಯಿಂದ ಏನಾದರೂ ತಪ್ಪಿದ್ದರೆ ಸರಿ ಮಾಡೋಣ. ಅಥವಾ ಕೆಲವು ಕಡೆ ಏನಾಗಿದೆ ಎಂದರೆ, ಸ್ಲಮ್‌ನಲ್ಲಿ ಏನು ಮಾಡುತ್ತಾರೆ ಎಂದರೆ ಫ್ರಿಡ್ಜ್ ಮತ್ತು ಟಿವಿ ಇಟ್ಟುಕೊಂಡು ಹೆಚ್ಚು ವಿದ್ಯುತ್ ಬಳಸುತ್ತಾರೆ. ನಾವು ಒಂದು ಫ್ರೀ ಲೈಟ್ ಎಂದು ಕೊಟ್ಟಿದ್ದೇವೆ. ಯಾವುದಕ್ಕೆ 65 ಸಾವಿರ ರೂಪಾಯಿಗಳನ್ನು ಹಾಕಿದ್ದಾರೆ ಆದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ನನಗೆ ಸ್ವಲ್ಪ ಮಾಹಿತಿಯನ್ನು ಕಳುಹಿಸಿ, ನಿಮ್ಮ ಎದುರುಗಡೆ ಕುಳಿತು ಅದಕ್ಕೆ ಒಂದು ಪರಿಹಾರ ಕಂಡು ಹಿಡಿಯುವುದಕ್ಕೆ ಪ್ರಯತ್ನ ಪಡುತ್ತೇನೆ. ಆದರೆ ಜೊತೆಗೆ ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿದರು. ಯಾರಾದರೂ ಆಕಸ್ಮಿಕವಾಗಿ ವಿದ್ಯುತ್ ಅಪಘಾತದಿಂದ ತೀರಿ ಹೋದರೆ, ಕೆಎಸ್‌ಆರ್‌ಟಿಸಿಯವರ ತರಹ ಆಗಲೇ ಸ್ಥಳಕ್ಕೆ ಹೋಗಿ ಪರಿಹಾರ ಕೊಡುವಂತಹ ವ್ಯವಸ್ಥೆಯಾಗಬೇಕೆಂದರು. ನಾನು ಬಂದ ಮೇಲೆ ಸಂಬಂಧಪಟ್ಟ ಸೂಪರಿಂಟೆಂಡಿಂಗ್ ಅಥವಾ ಎಕ್ಸಿಕ್ಯೂಟಿವ್ ಇಂಜಿನೀಯರ್ ಸ್ಥಳಕ್ಕೆ ಹೋಗಿ 15 ದಿವಸದಲ್ಲಿ ಪರಿಹಾರ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಯಾವ ಕಡೆಯಾದರೂ 15 ದಿವಸಕ್ಕೂ ಮೇಲ್ಪಟ್ಟು ಪರಿಹಾರ ಕೊಡದಿದ್ದರೆ ನನ್ನ ಗಮನಕ್ಕೆ ತನ್ನಿ ಬೇಕಾದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಕಟ್ಟುನಿಟ್ಟಾಗಿ ಕೆಲಸ ಮಾಡಬೇಕೆಂದು ನಮ್ಮ ಇಲಾಖಾ ಅಧಿಕಾರಿಗಳಿಗೆ ಸುತ್ತೋಲೆ ಕಳುಹಿಸಿದ್ದೇನೆ. 5 ಕಂಪನಿಗಳಲ್ಲಿ ಇಂಧನ ಇಲಾಖೆಯಿಂದ ಏನಾದರೂ ತಪ್ಪಾಗಿದ್ದರೆ, ನಿನ್ನೆ ಮಂಗಳೂರಿನಲ್ಲಿ ವೈರ್ ಕದಿಯುವುದಕ್ಕೆ ಹೋದರು ಎರಡು ಜನ ಸತ್ತು ಹೋಗಿದ್ದಾರೆ. ಅಂಥವುಗಳಿಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇಲಾಖೆಯಿಂದ ಏನಾದರೂ ತಪ್ಪಿದ್ದರೆ ಕೂಡಲೇ 15 ದಿವಸದಲ್ಲಿ ಪರಿಹಾರ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಅಂತಹದ್ದು ಎಲ್ಲಾದರೂ ಆಗಿದ್ದು ಶಾಸಕರ ಗಮನಕ್ಕೆ ಬಂದರೆ ಕೂಡಲೇ ತಿಳಿಸಿದರೆ ಅದರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬೆಂಗಳೂರು ನಗರದಲ್ಲಿ ಬಡವರು ಇದ್ದಾರೆ. ಸುಮಾರು 700 ಸ್ಲಮ್‌ಗಳಲ್ಲಿ ಮಾನ್ಯ ಅಶೋಕ್‌ರವರು ಹೇಳಿದಂತೆ ಈ ಪ್ರಾಬ್ಲಮ್ ಇದೆ. ದಯಮಾಡಿ ತಾವು ವಿಶೇಷವಾಗಿ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಹಾಗೆ ಈ ಸಮಸ್ಯೆ ಬಗ್ಗೆ ಸಭೆಯನ್ನು ಕರೆದು ಬಗೆಹರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. 20–30 ಸಾವಿರ ರೂ. ಬಿಲ್ ಕೊಟ್ಟು ಈಗ ಡಿಸ್‌ಕನೆಕ್ಟ್ ಮಾಡಿದ್ದಾರೆ. ಮಕ್ಕಳುಗಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಕಷ್ಟವಾಗುತ್ತದೆ. ದಯಮಾಡಿ ವಿಶೇಷವಾದ ಒಂದು ಸಭೆಯನ್ನು ಕರೆಯಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಇದರಿಂದ ಇಲಾಖೆಗೂ ಬರ್ಡನ್ ಆಗುತ್ತಿದೆ. ನಾನು ಕಳೆದ 3 ವರ್ಷಗಳಿಂದ ಹೇಳುತ್ತಿದ್ದೇನೆ. ಒಂದು ಸಲ ಸೆಟ್ಲ್‌ಮೆಂಟ್ ಮಾಡಿ. ಅವತ್ತಿನಿಂದ ಅವರು 100 ಅಥವಾ 150 ರೂಪಾಯಿ ಬಿಲ್ ಕಟ್ಟುವುದಕ್ಕೆ ರೆಡಿ ಇರುತ್ತಾರೆ. ನೀವು ಸೆಟ್ಲ್‌ಮೆಂಟ್ ಮಾಡುವುದೇ ಇಲ್ಲ. ನಾವು ಹೇಗೋ ರಾಜಕಾರಣಿಗಳು ಬಲವಂತ ಮಾಡಿ ಕಟ್ಟಿಸುತ್ತೇವೆ. ಯಾವ

ಸಮಯದಲ್ಲಿ ಪವರ್‌ಕಟ್ ಮಾಡುತ್ತಾರೆಂದರೆ ಚುನಾವಣೆ ಬಂದ ಸಂದರ್ಭದಲ್ಲಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಎಕ್ಸಾಮ್ ಬಂದ ಸಂದರ್ಭದಲ್ಲಿಯೇ ಕಟ್ ಮಾಡುತ್ತಾರೆ. ಆಗ ನಮ್ಮ ಕರ್ತವ್ಯ ನಾವು ಮಾಡಿ ಹಾಕಿಸಿಬಿಡುತ್ತೇವೆ. ಇದು ಮತ್ತೆ ಒಂದು ವರ್ಷ ನಡೆಯುತ್ತದೆ. ಆ ಬಿಲ್ ಮಾತ್ರ ಹಾಗೆ ಹೋಗುತ್ತಿರುತ್ತದೆ. ಎಷ್ಟು ಎಂದು ಒಂದು ಸಲ ಸೆಟ್ಲ್ ಮಾಡಿಬಿಡಿ. ಮುಂದೆ ಅವರು ಕಟ್ಟಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ. ನಿಮಗೆ ತಿಂಗಳಿಗೆ ಆದಾಯ ಬರುತ್ತದೆ ನೀವು ಹಾಗೆ ಮಾಡದಿದ್ದರೆ ನಿಮಗೆ ಆದಾಯ ತಪ್ಪಿ ಹೋಗುತ್ತಿದೆ. ದಯವಿಟ್ಟು ಅದನ್ನು ಒಂದು ಸಲ ಮನ್ನಾ ಮಾಡಿಬಿಡಿ. ಮನ್ನಾ ಮಾಡಿದ ನಂತರ ಅಲ್ಲಿಂದ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟರೆ ಒಳ್ಳೆಯದೆಂದು ನನ್ನ ಮನವಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ರೈತರ ಪಂಪ್‌ಸೆಟ್‌ಗಳಿಗೆ ದಿನಾಂಕ 31–3–2003 ರವರೆಗೆ ಇದ್ದಂಥ ಬಾಕಿಯನ್ನು ಹಿಂದಿನ ಸರ್ಕಾರ ಪೂರ್ಣ ಮನ್ನಾ ಮಾಡಿತ್ತು. 2004ರಲ್ಲಿ 2003ನೇ ಇಸ್ವಿಯ ಬಾಕಿಯನ್ನು ಈ ಆರ್ಡರ್ ಆಗುವುದರೊಳಗಾಗಿ ಕಟ್ಟಿರತಕ್ಕಂಥವರಿಗೂ ಕೂಡ ವಾಪಸ್ಸು ಅವರ ಬಿಲ್‌ನಲ್ಲಿ ಅಡ್ಜಸ್ಟ್‌ಮೆಂಟ್ ಮಾಡಬೇಕೆಂದು ಹೇಳಿ ಸರ್ಕಾರ ಆದೇಶ ಕೊಟ್ಟಿದೆ. ಗೌರ್ನಮೆಂಟ್ ಆರ್ಡರ್ ನಂಬರ್:ಎಫ್‌ಎಂ:44–ಪಿಎಸ್‌ಆರ್–2001 ಡೇಟೆಡ್ 21–2–2004ರಲ್ಲಿ ಕೊಟ್ಟಿದೆ. ಇದರ ಪ್ರಕಾರ ಇವತ್ತಿಗೂ ಕೂಡ ನಮಗೆ ಹಣ ಅಡ್ಜೆಸ್ಟ್ ಆಗಲಿಲ್ಲ. ನಮ್ಮ ಪಂಪ್‌ಸೆಟ್ ಬಳಕೆದಾರರಿಗೆ, ಯಾರು ಪ್ರಾಮಾಣಿಕವಾಗಿ ಕಟ್ಟಿದ್ದಾರೋ ಅವರಿಗೆ ಮೊದಲನೇ ಆದ್ಯತೆ ಕೊಟ್ಟು ಅವರಿಗೆ ಅಡ್ಜಸ್ಟ್ ಮಾಡಬೇಕಾಗಿತ್ತು ಈ ಸರ್ಕಾರಿ ಆದೇಶದ ಪ್ರಕಾರ, ಯಾವ ಕಾರಣಕ್ಕಾಗಿ ಕೊಡಲಿಲ್ಲವೆಂದು, ನಮ್ಮ ವಿದ್ಯುತ್ ಕಂಪನಿಯಲ್ಲಿ ಕೇಳಿದರೆ ಸರ್ಕಾರದಿಂದ ದುಡ್ಡು ಬರಲಿಲ್ಲವೆಂದು ಹೇಳುತ್ತಾರೆ. ಸರ್ಕಾರ ಕೆಲವು ಸಲ ಪುಗಸಟ್ಟೆಯಾಗಿ ಅನೌನ್ಸ್‌ಮೆಂಟ್ ಮಾಡಿ ಬಿಡುವುದು. ಘೋಷಣೆಗಳನ್ನು ಮಾಡಿ ಹೀಗೆ ಅಡ್ಜಸ್ಟ್‌ಮೆಂಟ್ ಮಾಡಿದ್ದೇವೆ, ಬಡ್ಡಿ ಕಡಿಮೆ ಮಾಡಿದ್ದೇವೆ ಎಂದು ಹೇಳಿ, ದುಡ್ಡು ಕೊಡುವುದೇ ಇಲ್ಲ. ಕಂಪನಿಯು ನಷ್ಟವನ್ನು ನಾವು ಭರೀಸುವುದಕ್ಕಾಗುವುದಿಲ್ಲವೆಂದು ಹೇಳಿ, ಅವರು ಇವತ್ತಿಗೂ ಕೂಡ ಅಡ್ಜಸ್ಟ್‌ಮೆಂಟ್ ಮಾಡಲಿಲ್ಲ. ನಮ್ಮ ಲೆಡ್ಜರ್‌ನಲ್ಲಿ ಇವತ್ತು ಬಡ್ಡಿ ಹಾಕುವ ಕೆಲಸ ನಡೆಯುತ್ತಿದೆ. ದಯವಿಟ್ಟು ಮಾನ್ಯ ಸಚಿವರು ಇದನ್ನು ಗಮನಿಸಬೇಕು, ಇದನ್ನು ಎಫ್‌ಡಿಯಿಂದ ಕ್ಲಿಯರ್ ಮಾಡಿಸಿ, ದಯವಿಟ್ಟು ಅದನ್ನು ಕೊಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕಟ್ಟಕಡೆಯದಾಗಿ ಮಾನ್ಯ ಸಚಿವರ ಹತ್ತಿರ ಒಂದು ವಿನಂತಿ, ಕರ್ನಾಟಕ ಪವರ್ ಕಾರ್ಪೋರೇಷನ್ ನಿಮಗೆ ಬರುತ್ತದೆ, ನಾವು ಮಲೆನಾಡಿನವರು ರಾಜ್ಯಕ್ಕೆ ಬೆಳಕು ಕೊಡುವುದಕ್ಕೋಸ್ಕರ ಮುಳುಗಿದವರು ನಮ್ಮ ಬದುಕನ್ನು ಕತ್ತಲು ಮಾಡಿಕೊಂಡಿರುವವರು ಚಕ್ರಾದಲ್ಲಿ, ವರಾಹಿಯಲ್ಲಿ, ಶರಾವತಿಯಲ್ಲಿ, ಭದ್ರಾದಲ್ಲಿ ತುಂಗಾದಲ್ಲಿ ಎಲ್ಲದರಲ್ಲೂ ನಾವು ಭೂಮಿಯನ್ನು ಕಳದುಕೊಂಡಿರುತ್ತೇವೆ. ನಾವು ಆ ಕಾಲದಲ್ಲಿ ಪ್ರತಿಭಟನೆಯನ್ನು ಮಾಡಲಿಲ್ಲ, ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿ ಜಮೀನು ಹಾಗೂ ಮನೆಗಳನ್ನು ಕಳೆದುಕೊಂಡವರು ಇವತ್ತು ಅನಾಥರಾಗಿ ಅಲೆಯುತ್ತಿದ್ದಾರೆ. ಅನೇಕ ಪರಿಹಾರಗಳು ಪುನರ್‌ವಸತಿಗಳು ಇವತ್ತಿಗೂ ಕೂಡ ಕೊಡುತ್ತಿಲ್ಲ. ಬೇರೆ ಬೇರೆ ಕಛೇರಿಗಳಲ್ಲಿ ಇದರ ಕಡತಗಳು ಕೊಳೆಯುತ್ತಾ ಬಿದ್ದಿವೆ. ಕೋರ್ಟುಗಳಲ್ಲಿ ಇವತ್ತು ಕೆಲವು ಜಡ್ಜ್‌ಮೆಂಟ್‌ಗಳು ಬರುತ್ತಿವೆ. ನಿಮ್ಮವರು ಹಣವನ್ನು ಕಟ್ಟುತ್ತಿಲ್ಲ. ಯಾವ ಕರ್ಮಕ್ಕಾಗಿ ಎಂದು ಗೊತ್ತಿಲ್ಲ. ನಾವು ಆ ಮುಳುಗಡೆ ನೀರಿನಿಂದ ವ್ಯಾಪಿಸಿ ಮಧ್ಯದಲ್ಲಿ

ಉಳಿದಿರತಕ್ಕಂತಹ ಹಳ್ಳಿಗಳಿಗೆ ಸಂಪರ್ಕಗಳು ಇವತ್ತು ಕಡಿದುಹೋಗಿವೆ, ರಸ್ತೆ ಹಾಗೂ ಸೇತುವೆ ಮಾಡಿಕೊಡಿ ಎಂದು ಹೈಪವರ್ ಕಮಿಟಿಯಲ್ಲಿ ಕುಳಿತುಕೊಂಡು ಇವತ್ತು ಮಾತನಾಡುತ್ತೇವೆ. ಇದರ ಬಗ್ಗೆ ನಿರ್ಣಯಗಳು ಆಗುತ್ತವೆ. ಅದು ಕಾರ್ಯಗತವಾಗುವುದಿಲ್ಲ. ಇದರ ಬಗ್ಗೆ ನನ್ನ ವಿಶೇಷವಾದ ವಿನಂತಿ ಇದೆ, ಇವತ್ತು ಇಲ್ಲಿಯೂ ಕೂಡ ನಮ್ಮ ವರಾಹಿ ಬಗ್ಗೆ ಮಾನ್ಯ ಮಂತ್ರಿಗಳು ಹೈಪವರ್ ಕಮಿಟಿಯನ್ನು ರಚನೆ ಮಾಡಲಿಲ್ಲ. ಸ್ವಲ್ಪ ಸಮಸ್ಯೆಗಳು ಬಾಕಿ ಉಳಿದಿವೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ವರಾಹಿ ಹೈಪವರ್ ಕಮಿಟಿಯ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಗಾಜನೂರು ಡ್ಯಾಂಗೆ ಗೇಟ್‌ನ್ನು ಇಳಿಸುತ್ತಾರೆ ಆ ಗಾಜನೂರು ಡ್ಯಾಂಗೆ ಗೇಟ್‌ನ್ನು ಹಾಕಿದರೆ ಈ ಕಡೆಯವರು ಏನಾಗುತ್ತಾರೆಂದು ಗೊತ್ತಿಲ್ಲ. ಅದರ ಬಗ್ಗೆ ಹೈಪವರ್ ಕಮಿಟಿಯಲ್ಲಿ ಒಂದು ಮೀಟಿಂಗ್ ಕೂಡ ಆಗಲಿಲ್ಲ. ನಾನು ಆ ಕ್ಷೇತ್ರದ ಎಂಎಲ್‌ಎ ಆಗಿದ್ದೇನೆ, ನನ್ನನ್ನೂ ಬಿಟ್ಟು ಅವರು ಮೀಟಿಂಗ್ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ ಅದರ ಬಗ್ಗೆ ನಾನು ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ: ನಾವು ಅದಕ್ಕೋಸ್ಕರ ತ್ಯಾಗ ಮಾಡಿರುವಂತಹವರ ಬದುಕಿನ ಬಗ್ಗೆ ಆಲೋಚನೆಯನ್ನು ಮಾಡಿ ದಯವಿಟ್ಟು ಇದನ್ನು ಕೊಡಿ. ಆ ಎಂಡಿಗಳಿಗೆ ಅವರೆಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ನೀವೇ ಒಂದು ದಿವಸ ಬಂದು ಅಲ್ಲಿ ಮೀಟಿಂಗ್ ಮಾಡಿ, ನಮ್ಮ ಚುನಾಯಿತ ಪ್ರತಿನಿಧಿಗಳನ್ನು ಕರೆಯಿರಿ. ಈಗ 10 ವರ್ಷ 20 ವರ್ಷಗಳಾಯಿತು. ಭೂಮಿ ಮನೆ ಕಳೆದುಕೊಂಡರೂ ಇವತ್ತಿಗೂ ಕೂಡ ಪರಿಹಾರ ಸಿಗುವುದಿಲ್ಲ, ಎಂದರೆ ಇದಕ್ಕೆ ಅರ್ಥವಿಲ್ಲ. ಇನ್ನೂ ಮುಂದೆ ಹೈಡಲ್ ಪ್ರಾಜೆಕ್ಟ್ ಮಾಡುವುದಕ್ಕೆ ಹೋದರೆ ಯಾರೂ ಬಿಡುವುದಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಿಮ್ಮ ಕಾಲದಲ್ಲಿಯಾದರೂ ಈ ಕೆಲಸವನ್ನು ತಾವು ಮಾಡಬೇಕೆಂದು ಕೇಳುತ್ತೇನೆ. ರಾಜ್ಯದ ವಿದ್ಯುತ್ತಿನ ಬಗ್ಗೆ ಮತ್ತು ಇಂಧನದ ಬಗ್ಗೆ ವಿಶೇಷವಾಗಿರತಕ್ಕಂತಹ ಗಮನ ಕೊಡಬೇಕು. ನಿಮ್ಮ ಕಾಲದಲ್ಲಿ ಸ್ವಲ್ಪ ಹಾಗೂ ಹೀಗೂ ಹಣಕಾಸು ಓಡಾಡುತ್ತಿದೆ. ಈಗ ಸ್ವಲ್ಪ ಪರವಾಗಿಲ್ಲ ಅನ್ನಿಸುತ್ತದೆ. ಆದರೆ ಇದು ಸಾಕಾಗುತ್ತಿಲ್ಲ. ಇನ್ನು ಕೂಡ ಇದನ್ನು ಸ್ಪೀಡ್‌ಅಪ್ ಮಾಡುವಂತಹ ಅವಶ್ಯಕತೆ ಇದೆ; ಎನ್ನುವಂತಹ ಮಾತನ್ನು ಹೇಳುತ್ತಾ ಅಧ್ಯಕ್ಷರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅ) ಶಿಕಾರಿಪುರ ತಾಲ್ಲೂಕಿನ ಅಂಬಳಿಹುಳ ಜಲಾಶಯ ತುಂಬಿ ಕೆಲವು ಹಳ್ಳಿಗಳು ಮುಳುಗಿ ಹೋಗಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ತಾವು ಈ ಕಡೆ ಗಮನಿಸಬೇಕು. ಈಗತಾನೇ ಒಂದು ಗಂಟೆಯಿಂದ ಸುದ್ದಿ ಬರುತ್ತಿದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಅಂಬಳಿಹುಳ ಜಲಾಶಯ ಇದೆ, ಈ ಮಣ್ಣಾತ್ಮ ಇರಿಗೇಷನ್ ಸ್ಕ್ರೆಟರಿಗೆ ಈಗ ಸುಮಾರು 15–20 ದಿವಸಗಳು ಒಂದು ತಿಂಗಳಿಂದ ಈಚೆಗೆ ಸ್ಪಾಟ್ ತೋರಿಸಿಕೊಂಡು ಬಂದಿದ್ದೇನೆ. ನಾನು ಅಧಿಕಾರಿಗಳ ಹತ್ತಿರ ಎಲ್ಲವನ್ನೂ ಹೇಳಿಕೊಂಡೆ. ಅದನ್ನು ಇಂಪ್ರೂವ್‌ಮೆಂಟ್‌ನ್ನು ಮಾಡಿಕೊಂಡ ಮೇಲೆ ಸರಿಯಾದ ರೀತಿಯಲ್ಲಿ ಅಲ್ಲಿಯ ತಗ್ಗು ಉಬ್ಬುಗಳನ್ನು ಮುಚ್ಚಲಿಲ್ಲ. ಇದರ ಪರಿಣಾಮವಾಗಿ ಜಲಾಶಯವು ತುಂಬುತ್ತಿದೆ, ಅಂಬಳಿಹುಳ